ನಡೆದದ್ದೇ ದಾರಿ

ನಲವತ್ತೆಂಟು ಕವಿತೆಗಳು



ಶಾ. ಬಾಲುರಾವ್

ಅಕ್ಷರ ಪ್ರಕಾಶನ

ನಡೆದದ್ದೇ ದಾರಿ

ನಡೆದದ್ದೇ ದಾರಿ

ನಲವತ್ತೆಂಟು ಕವಿತೆಗಳು

ಶಾ. ಬಾಲುರಾವ್

ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಕರ್ನಾಟಕ

Nadedadde Dari (48 poems in Kannada) by S. Balu Rao, Kaveri, 131, J Extension, Lakshmi Nagar, Delhi 110 092 and published by Akshara Prakashana, Heggodu, Sagara, Karnataka 577 417. First Edition: 1998.

Front Cover by Pushp Betala, Delhi
(Lalit Kala Akademi Award-winning sculpture, 1983).
Back Cover by Jagadish Chandar, Delhi
(Illustration of 'Nagara mattu Chandra', p.28).

ಮೊದಲ ಮುದ್ರಣ: ೧೯೯೮.

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು.
ಮುದ್ರಣ: ಪ್ರಗತಿ ಮುದ್ರಣಾಲಯ, ಶಿವಮೊಗ್ಗ.

ಬೆಲೆ: ರೂ. 50-00

೧೯೫೫ರಿಂದ ಹಿಡಿದು ಅವರ ಕೊನೆಗಾಲದ ತನಕ

ಇಪ್ಪತ್ತಾರು ವರ್ಷಗಳ ಕಾಲ

ಹಿರಿಯಣ್ಣನ ಅಕ್ಕರೆ ತೋರಿ

ನನ್ನ ಬದುಕನ್ನು ಶ್ರೀಮಂತಗೊಳಿಸಿದ

ಕವಿ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ

ಅವರ ಮಧುರ ಸ್ಮೃತಿಗೆ

ಮುಮ್ಮಾತು

ನನಗೇ ತಮಾಷೆಯೆನಿಸುವ ನನ್ನ ಬದುಕಿನ ಕೆಲವಾರು ವ್ಯಂಗ್ಯಗಳಲ್ಲಿ ಒಂದೆಂದರೆ ೧೯೪೭-೫೧ರ ಕಾಲೇಜು ದಿನಗಳಿಂದ ಹಿಡಿದು ಇವತ್ತಿನತನಕ ಕವಿತೆಯ ಹೆಸರಿನಲ್ಲಿ ನನಗೆ ತೋಚಿದ್ದನ್ನು ತೋಚಿದಂತೆ ಗೀಚುತ್ತ ಬಂದಿದ್ದು, ಅವುಗಳಲ್ಲಿ ಅನೇಕವು ಆಗಿಂದಾಗ್ಗೆ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಗೊಂಡು, ನನ್ನ ಅಂತರಂಗದ ತಜ್ಞಮಿತ್ರರಿಗೆ ಒಪ್ಪಿಗೆಯಾಗಿದ್ದರೂ ನನ್ನ ಸರಿಯಾದ ಕವಿತಾ ಸಂಗ್ರಹವೊಂದೂ ಇದುವರಗೆ ಬಂದಿಲ್ಲ. ೧೯೮೦ರಲ್ಲಿ 'ಸೂರ್ಯ ಇವನೊಬ್ಬನೇ' ಸಂಗ್ರಹ ಪ್ರಕಟವಾಗಿತ್ತು, ನಿಜ. ಆದರ ಅದು ಒಂದೇ ವಿಷಯುವನ್ನು ಕುರಿತದ್ದು. ಇನ್ನೊಂದು, ೧೯೮೪ರಲ್ಲಿ ಪ್ರಕಟವಾದ ಇಂಗ್ಲಿಷ್ ಕವಿತಾ ಸಂಗ್ರಹ, The Still Small Voice, ಕನ್ನಡದ ಆಚೆಯದು. ಇದಕ್ಕೆ ಮುಖ್ಯ ಕಾರಣವೆಂದರೆ ನನ್ನ ಸೋಮಾರಿತನದ ಜತೆಗೆ ನನ್ನ ರಚನೆಗಳ ಬಗ್ಗೆ ನನ್ನೊಳಗಿನ ತೃಪ್ತಿ-ಅತೃಪ್ತಿಗಳ ಹೊಯ್ದಾಟ, ಗೊಂದಲ.

ಈಚೆಗೊಂದು ದಿನ, ಇಲ್ಲಿ ಬಂದಿದ್ದ ನನ್ನ ತರುಣ ಕವಿಮಿತ್ರ ಜಯಂತ ಕಾಯ್ಕಿಣಿ, ಅದೇ ಆಗ ಪ್ರಕಟವಾಗಿದ್ದ ನನ್ನ ಒಂದೆರಡು ಕವಿತೆಗಳನ್ನು ಓದಿ ಮೆಚ್ಚಿದ್ದವನು, ''ಕಾಕಾ, ನಿಮ್ಮ ಕವಿತೆಗಳನ್ನೆಲ್ಲ ನೋಡಬೇಕಾಗಿದೆ, ತೆಗೆಯಿರಿ'' ಎಂದು ಹಟಹಿಡಿದ ಫಲವಾಗಿ ಕಪಾಟಿನ ಹಳೆಯ ಕಡತಗಳಲ್ಲಿ ಅಡಗಿದ್ದ ನೂರಕ್ಕೂ ಹೆಚ್ಚು ಕವಿತೆಗಳು ಹೊರಬಂದವು. ಅದರಲ್ಲಿ ನಲವತ್ತೆಂಟನ್ನು ಆರಿಸಿ ಈ ಸಂಗ್ರಹದಲ್ಲಿ ಕೊಟ್ಟಿದೆ. ಸ್ವಯಂಪೂರ್ಣವಾದ ಇನ್ನು ಐವತ್ತು ಸಣ್ಣವು ಮುಂದಿನ ಸಂಗ್ರಹಕ್ಕೆ ಕಾಯಲಿವೆ. ಈ ಆಯ್ಕೆಯಲ್ಲಿ ಸಮಪಾಲು 'ಕೀರ್ತಿ' ಜಯಂತನಿಗೆ ಸಲ್ಲುತ್ತದೆ.

ಈಚಿನ ವರ್ಷಗಳಲ್ಲಿ ಕಾವ್ಯಕರ್ಮದ ಬಗ್ಗೆ ಕೆಲವು ವಿಶಿಷ್ಟ ಧೋರಣೆಗಳು ನನ್ನ ಕವಿತಾರಚನೆಯನ್ನು ನಿಯಂತ್ರಿಸಿವೆ. ಇಂದಿನ ಕನ್ನಡ ಕಾವ್ಯ ಇತ್ತ ವಸ್ತು-ವಿಷಯ, ಅತ್ತ ತಂತ್ರ-ಅಭಿವ್ಯಕ್ತಿ– ಎರಡರಲ್ಲೂ ಅತಿಯಾದ ಗಂಭೀರದೃಷ್ಟಿ ತಾಳಿ, ಏಕಮುಖವಾಗಿ ಸಾಗಿದೆ. ಕೆಲವು ಅಪವಾದಗಳ ಹೊರತು, ಅದರಲ್ಲಿ ಹೆಚ್ಚಾಗಿ ಕಾಣುವುದು: ಆತ್ಮನಿರತರ ಒಳತುರಿಕೆ, ದಲಿತರ ದ್ವೇಷ-ಕ್ರೋಧ, ಸ್ತ್ರೀವಾದಿಗಳ ಸಿಟ್ಟು-ರೋಧನ, ಹಸಿ-ಹುಸಿ ಮಾನವೀಯ ಕಾಳಜಿಗಳು, ಇಂದಿನ ಸಮಸ್ಯೆಗಳಿಗೆ ನಿನ್ನೆಯ ಇತಿಹಾಸ, ಪುರಾಣ, ಜಾನಪದಗಳಲ್ಲಿ ಉತ್ತರ ಹುಡುಕುವ ಪ್ರಯತ್ನ, ಇಂತಹವೇ. ಕವಿತೆ ಒಟ್ಟು ಬದುಕಿನ ಪ್ರತಿಧ್ವನಿ ಅನ್ನುವುದಾದರೆ ಬದುಕಿನಲ್ಲಿ ಸಲ್ಲುವುದೆಲ್ಲವೂ ಕವಿತೆಯಲ್ಲೂ ಸಲ್ಲಬೇಕು. ಗಂಭೀರ ವಿಷಯಗಳ ಜತೆಗೆ, ಮೇಲ್ಮೈಗೆ ಸಾಧಾರಣ, ಅಲ್ಪ, ಕ್ಷುಲ್ಲಕ ಎಂದು ಅನಿಸುವುದು ಸಹ, ಅದು ಬದುಕಿಗೆ ಸಂಗತವಾದರೆ, ಕಲ್ಪನಾಶೀಲನಾದ ಕವಿಯ ಕೈಯಲ್ಲಿ ಕವಿತೆಯಾಗಿ

ಮಾರ್ಪಟ್ಟು ಓದುಗರಿಗೆ ಖುಷಿ ಕೊಡುವಂತಾಗಬೇಕು. "ಕವಿಜೀವದ ಬ್ಯಾಸರ ಹರಿಸಾಕ.... ಹೂತ ಹುಣಸೀ ಮರ ಸಾಕ" ಎಂದು ಕವಿ ಬೇಂದ್ರೆ ಅಂದದ್ದು ಇದೇ ಅರ್ಥದಲ್ಲೇನೊ!

ಅಭಿವ್ಯಕ್ತಿಯ ವಿಷಯದಲ್ಲಿ ಸಹ ನಾವಿನ್ನೂ ಪೂರ್ಣ ಮುಕ್ತರಾಗಿಲ್ಲ. ಇವತ್ತಿಗೂ ನಮ್ಮ ಹೆಚ್ಚಿನ ಕವಿತೆಗಳು ಹಿಂದಿನ ನವೋದಯ ಅಥವಾ ನವ್ಯಕಾಲದ, ಇಲ್ಲವೇ ಇಂಗ್ಲಿಷ್ ಕಾವ್ಯಪರಂಪರೆಯಿಂದ ಎರವಲು ತಂದ ಎರಕಗಳಲ್ಲೇ ತೊಳಲುತ್ತಿವೆ. ಕೆಲವು ಕವಿಗಳಲ್ಲಿ ಕವಿತೆ ಒಗಟಾಗಿಯೇ ಉಳಿದು, ಕವಿಗಳೇ ಕವಿಗಳನ್ನು 'ಈ ನಿಮ್ಮ ಪದ್ಯದ ಅರ್ಥವೇನು?' ಎಂದು ಕೇಳುವಂತಾಗಿದೆ. ಈ ಕಾರಣಗಳಿಂದಾಗಿ, ಕನ್ನಡ ಕವಿತೆಗೆ ಓದುಗರು ಕಡಿಮೆಯಾಗಿ, ಅದು ಆತ್ಮಹತ್ಯೆಯ ದಾರಿ ಹಿಡಿದಿದೆ ಎಂದು ನನಗನಿಸುತ್ತದೆ.

ವಿಷಯ-ವಸ್ತುಗಳಲ್ಲಿ ಹೊಸ ಹೊಸದನ್ನು ಅರಸುವುದು, ಅಭಿವ್ಯಕ್ತಿಯಲ್ಲಿ ಹೊಸ ಹೊಸ ಧ್ವನಿ, ವರ್ಣ, ಲಯಗಳನ್ನು ಆಕರಿಸಿಕೊಂಡು (ಉದಾ. ಅಲಂಕಾರ ತೊರೆದ ತೀರಾ ಸರಳ ಮಾತುಗಳಲ್ಲಿ ಕವಿತೆಯನ್ನು ಹೊರಡಿಸುವುದು, ಗಂಭೀರ ವಿಷಯವನ್ನು ಸಹ ಹಗುರವಾಗಿ ಹೇಳಿ ಓದುಗರ ಮನಮುಟ್ಟಿಸುವುದು), ಹತ್ತು ಮಂದಿಯ ಮುಂದೆ ಓದಲು ಬರುವಂತೆ ಅದರ ನಡೆನುಡಿಗಳಲ್ಲಿ ಅಭಿನಯಶೀಲತೆ ತರುವುದು ನನ್ನ ಪ್ರಯತ್ನ. ಈ ಸಂಕಲನದ, ಹೆಚ್ಚಾಗಿ ಈಚಿನ, ಕವಿತೆಗಳಲ್ಲಿ ಇದರ ಸುಳಿವು ಕಂಡೀತು.

ಸಂಗ್ರಹವನ್ನು ಬಯಲಿಗೆ ತರಿಸಿದ ಚಿ. ಜಯಂತ ಕಾಯ್ಕಿಣಿಗೆ, ಹಸ್ತಪ್ರತಿ ತಲಪಿದ ತಕ್ಷಣ ಓದಿ, ಹೆಗ್ಗೋಡಿನಿಂದ ಟೆಲಿಫೋನ್ ಮಾಡಿ ತಮ್ಮ ಬೆಚ್ಚನೆಯ ಪ್ರತಿಕ್ರಿಯೆ ತಿಳಿಸಿ, ಪ್ರಕಟಿಸಲು ಮುಂದಾದ ಮಿತ್ರ ಶ್ರೀ ಕೆ.ವಿ. ಸುಬ್ಬಣ್ಣ ಅವರಿಗೆ ಹಾಗೂ ಮುದ್ರಣದ ಜವಾಬ್ದಾರಿ ಹೊತ್ತು ಇದನ್ನು ಸುಂದರಗೊಳಿಸಿದ ಚಿ. ಅಕ್ಷರನಿಗೆ ನನ್ನ ಹಾರ್ದಿಕ ಕೃತಜ್ಞತೆಗಳು.

ಡಿಸೆಂಬರ್, ೧೯೯೭ **ಶಾ. ಬಾಲುರಾವ್**
ಹೊಸ ದಿಲ್ಲಿ

ಒಳಹುರುಳು

ಬೇಂದ್ರೆ ಮತ್ತು ನಾವು

೧

ಆಗಿಲ್ಲಿ ಎಲ್ಲ ಬೆಂಗಾಡು, ಎಲ್ಲೆಲ್ಲು ಬರಿ ಕಲ್ಲು ಮುಳ್ಳು.
ಎಲ್ಲರಿಗು ಮುಂದಾಗಿ ದಾರಿ ಕಡಿಯುತ್ತ ಹೊರಟವರು ನೀವು
ಕೂಗಿ ಕರೆದಿರಿ. ನಡೆದೆವು ನಾವು ನಿಮ್ಮ ಹಿಂದೆ ಹಿಂದೆ
ಆ ದಾರಿಸುಖ ಅನುಭವಿಸಿ ನೋಡೋಣವೆಂದು.
ನಿಮ್ಮದೆಲ್ಲವೂ ನಮಗಾಗ ಹೊಸತು, ಹಿತ.
ಸಹಸ್ರಾರು ವರ್ಷಗಳ ಈ ನಾಡ ಪುಣ್ಯಸಂಪದ
ಐದಡಿಯಲ್ಲಿ ಘನಿಸಿ, ಘಮಘಮಿಸಿದಂತಿದ್ದ ಆ ನೀವು,
ಉಪನಿಷತ್ತಿನ ಋಷಿಗಳೆಂದರೆ ಹೀಗೆ ಇದ್ದಿರಬೇಕು
ಅನಿಸುವಂಥಾ ನಿಮ್ಮ ಧೀಮಂತ ವ್ಯಕ್ತಿತ್ವ,
ಊರ ಹಿರಿಯಜ್ಜತನದ ಗತ್ತು, ಗೌರವ.
ಎಲ್ಲೋ ಕನಸಿನಲಿ ಕಣ್ ನೆಟ್ಟು, ಅದರ ಬೆನ್ನಟ್ಟಿ
ಹೊರಟ ಪಟಪಟ ಮಾತು, ಆ ಮಾತಿಗಾಕಾರ ಕೊಟ್ಟಂತೆ
ಕೈ ಮಾಟ, ಜತೆಗೆ ಬೆರಳುಂಗುರದ ಆಟ,
ನಡುನಡುವೆ ಎದೆಬಿರಿಯ ನಗೆಸಾರ,
ಮೈ ಮರೆತಾಗ ಸಿಟ್ಟು, ಮೇಲಷ್ಟು ಬೈಗುಳ ಕೂಡ –
ನಿಮ್ಮ ಸಹವಾಸದಲಿ ಹಸನಾಗಿತ್ತು ದಾರಿ.

೨

ಮಾತು, ಕತೆ, ಇತಿಹಾಸ, ತತ್ವ, ಅರ್ಥಬೋಧೆ –
ನಿಮ್ಮ ಒಡನಾಟದಲಿ ನಾವು ಕೊಂಡದ್ದು ಒಂದೊಂದೆ!
ಅದರಲ್ಲಿ ಒಂದಂತೂ – 'ಮಾತ ಮಂತ್ರಿಸಿದರೆ ಅದೆ ಕವಿತೆ!'

ಎಂದು ಪ್ರತ್ಯಕ್ಷತೋರಿ, ಭೂತಗಳ ಕಟ್ಟಿಂದ
ನಮ್ಮನ್ನು ಬಿಡಿಸಿದ್ದು — ಶುದ್ಧ ಯಕ್ಷಿಣಿಯಾಟ.
ನೀವಾಡಿದಿರಿ, ನಾವು ಕೇಳಿದೆವು.
ಹಾಡಿದಿರಿ, ಗುನಗುನಿಸಿದೆವು.
ನಿಮ್ಮ ಭೃಂಗದ ಬೆನ್ನೇರಿ ಗಾಳಿದಾರಿಯಲಿ ಹಾರಿದೆವು.
ನಿಮ್ಮ ಪಾತರಗಿತ್ತಿ ಪಕ್ಕಕ್ಕೆ ಕೈ ಹಚ್ಚಿ
ಅದರ ಅರಿಸಿನಗಂಧ ತೊಡೆದು ಕುಣಿದಾಡಿದೆವು.
ನಮಗೆ ಹಸಿವಾದಾಗ ರೇಗಿ, ಅವರ ಕಿಚ್ಚಿಂದಲೇ
ನೀವು ದೈವಧರ್ಮಗಳನ್ನು ಸುಟ್ಟು ಮೃಷ್ಟಾನ್ನವಟ್ಟಿದಿರಿ,
ನಾವುಂಡು ತೇಗಿದೆವು. ಮತ್ತೆ ಬಾಯಾರಿದಾಗ
ಬೆಂಗಾಡ ನಡುವೆ ಭಗೀರಥನಾಗಿ ನಿಂತು
ನೀವು ಕಾವ್ಯಗಂಗೆಯನು ಧರೆಗವತರಿಸಿ ತಂದದ್ದು
ಒಹೋ, ಅದೆಂಥ ರಸಪ್ರಪಾತ!

೩

ಮುಂದೆ ನಡೆದೆವು. ನಡೆದಂತೆ ನೀವು ಥಟ್ಟನೆ ನಿಂತು
ಅತ್ತಲ್ಲೊ ಏನೋ ಕಂಡವರಂತೆ ಕಣ್ಣು ಹಾಯಿಸಿ
'ಅದೊ, ಅಲ್ಲಿ ಬಂಗಾರ ನೀರ ನೀಲತೀರ' ಎಂದಾಗ
ನಾವೂ ಬೆಪ್ಪಾಗಿ ನಿಂತು ನೋಡಿದೆವು.
ನಮಗಲ್ಲಿ ಕಂಡದ್ದು ಬರಿಶೂನ್ಯ, ಕತ್ತಲು.
ನಮ್ಮ ಪಾಲಿನ ಬೆರಗು ಹರಿದಿತ್ತೇನೊ!
ನಾವೇನು ಸಾಗರವೆ?
ನಮ್ಮ ಭಿಕ್ಷಾಪಾತ್ರ ತನ್ನ ಹಿಡಿ-ಅಳತೆಯಷ್ಟನ್ನೆ ತಿರಿದು
ಆ ಅಷ್ಟೈಶ್ವರ್ಯಕ್ಕೆ ತೃಪ್ತಿಪಟ್ಟಿತ್ತು.
ನಮಗರ್ಥವಾಯಿತೂ ಮಂತ್ರ,
ಇಲ್ಲವೇ ಬರಿ ಉಗುಳು.
ಅಷ್ಟೇ ಅಲ್ಲ, ನಮ್ಮಲ್ಲಿ ಒಬ್ಬಿಬ್ಬ ಮಂದಿ

ಪಾಟೀಲತನ ಮಾಡಿ, 'ಈ ಮುದುಕ ಬರಿ ಭೋಳೆ'
ಎಂದು ತೀರ್ಪಿತ್ತಾಗ ನಾವೂ ಹಲ್ಲು ಕಿಸಿದದ್ದುಂಟು.
ನೀವೊ? ನಿಲ್ಲದೆಯೆ ಹೊರಟುಬಿಟ್ಟಿರಿ
ನೀವು ಕಂಡರಿತ ನಿಮ್ಮ ನಂಬುಗೆಯ ಬೆಳಕಿನೆಡೆಗೆ.

೪

ನಾವಿನ್ನೂ ಇಲ್ಲೆ ನಿಂತಿದ್ದೇವೆ
ದಾರಿ ನಡುವಿನಲೆ ಜಾತ್ರೆ ಮುಗಿಸಿ.
ಹಿಂದೆ ಬರುತಿದೆ ಅಲ್ಲಿ ಹಿಂಡುಹಿಂಡಾಗಿ
ಈಗಿನ್ನು ಹಾಲುಂಡು ಬೆಳೆಯುತಿಹ ಹಸುಳೆ ಮಕ್ಕಳ ದಂಡು,
ಅವರಿಗೂ ಹಿಂದೆ, ಇನ್ನೂ ಹುಟ್ಟದಿಹ,
ಹುಟ್ಟಲಿಹ ಕನ್ನಡದ ಜೀವಕೋಟಿ.
ಬರಲವರು, ಬೆಳೆತು, ಬಲಿತು
ನಮ್ಮಂತೆ ಕಣ್ಣಿದ್ದೂ ಕುರುಡರಾಗದೆಯೆ
ಕಣ್ಣಿನೊಳಗೊಂದು ಒಳಗಣ್ಣ ತೆರೆದು ಮುಕ್ಕಣ್ಣರಾಗಿ.
ನಾವು ಹುಟ್ಟಾ ಮರುಳರೆಂದು ಸಾಬೀತಾದರೇನಂತೆ,
ನಿಮ್ಮ ಅರಳು-ಮರಳಿನ ಗುಡ್ಡವನ್ನವರು ಬುಡಮಟ್ಟ ಅಗೆದು
ಅಲ್ಲಿ ಕಲ್ಲು ಕಲ್ಲಲ್ಲಿ ಹರಳ ಕಾಣಲಿ.
ನಿಮ್ಮ ಕೂಡಾ ನಾವೂ ಒಂದಿಷ್ಟು ದಿನ ಒಟ್ಟಾಗಿ
ಒಂದೇ ದಾರಿ ನಡೆದದ್ದು ನಿಜವಿದ್ದಲ್ಲಿ ಅದರಾಣೆ!
ಆ ನಮ್ಮ ಮಕ್ಕಳಾದರೂ ತಂದು ತುಂಬಿಕೊಳ್ಳಲಿ
ನಮಗೆ ಕಾಣದೆ ಹೋದ ಆ ಹರಳ ಬೆಳಕ.

೧೯೮೧

ನಮ್ಮೂರು

ಸಾವಿರ ವರ್ಷಗಳ ಪೂರ್ವದ ಊರು ಇದು.
ಊರ ಈ ತುದಿಗೆ
ಹಿಂದೆ ಯಾವನೊ ಗಿರಿಜಾ- ಮೀಸೆಯ ದೊಣ್ಣೆನಾಯಕ
ಹಿರಿದ ಕತ್ತಿಯನ್ನೊರೆಗೆ ಸೇರಿಸದೆ
ತನಗಾಗದವರ ತಲೆ ಚೆಂಡಾಡಿ ಚೆಲ್ಲಿದ ರಕ್ತ
ಹರಿಯಲು ಹೇಸಿ ಹೆಪ್ಪಾಗಿ, ಕಡೆಗೆ ಕಪ್ಪುಗಲ್ಲಾಗಿ
ಊರೆತ್ತರವ ಮೀರಿ ಮಲೆತು ನಿಂತಿರುವ
ಕೋಟೆ-ಬಾಗಿಲು.
ಅದರೊತ್ತಿಗೆಯೇ
ಅವನಿಟ್ಟ ನೂರು ನಾಯಕಸಾನಿಯರ ನೆರಳುಗಳು
ಹಗಲ ಕತ್ತಲಮೂಲೆಗಳಾಗಿ ದಟ್ಟೈಸಿದ
ಬಂಗಾರದರಮನೆ.

ಇನ್ನೊಂದು ತುದಿಗೆ
ದೊಡ್ಡ ಗುಡಿ, ಪಂಚಕಳಶ ಗೋಪುರ.
ಅಲ್ಲಿ, ಬದುಕು ನಶ್ವರವೆಂದು
ಈಶ್ವರನಲ್ಲಿ ಆ ಪಾಪ ತೊಳೆದುಕೊಂಡ ಜನ
ತಾವು ಪಡೆಯಬಯಸಿದ್ದನ್ನು ಕಲ್ಲಲ್ಲಿ ಕಂಡು
ಕಂಡರಿಸಿದ ಹತ್ತಡಿಯ ಮಾಟದ ಮೂರ್ತಿ.
ಬದಿಯಲ್ಲೆ ಒಂದು ಮಠ –
ಹೆಂಡತಿ ಮಕ್ಕಳನ್ನು ಬಿಟ್ಟ ಯಾವನೊ ಸದ್ಗೃಹಸ್ಥ

ತಲೆ ಬೋಳಿಸಿಕೊಂಡು, ತತ್ತ್ವ ಬೋಧಿಸಿ
ಕೊನೆಗೆ ನೂರು ಮುಟ್ಟಿದರೂ ಸಾಯದ ಬೇಸರಕ್ಕೆ
ಕೂತುಕೂತಲ್ಲೆ ಗೋರಿ ಕಟ್ಟಿಸಿಕೊಂಡು
ಮಹಾತ್ಮನಾದದ್ದು ಅಲ್ಲಿಯೇ ಅಂತೆ.

ಈ ಜೋಡಿಕೋಡುಗಳ ನಡುವೆ ಪಾಳೂರು.
ಊರಲ್ಲಿ ಜುಜುಬಿ-ಜನ.
ಅವರೊ, ನೆಲ ಉತ್ತು ಬಿತ್ತು ಬೆಳೆ ತೆಗೆದು
ಹೆಂಡಿರ ಕೂಡಿ, ಮಕ್ಕಳ ಮಾಡಿ
ಅವರೊಡನೆ ನಕ್ಕು ನಲಿದಾಡಿ
ನೆರೆ ಮಂದಿ ಜತೆ ಚಕ್ಕಂದವಾಡುತ್ತ
ಪಗಡೆಯಾಟದ ನಡುವೆ ಹಾಸೆತ್ತಿ ಬೀಸಿ ಬೈದಾಡಿದರೂ
ಅವರ ಮನೆ ಮದುವೆಯಲ್ಲಿವರು ಅಡ್ಡೆಯ ಹೊತ್ತು
ಇವರ ಹೆಣ ಬಿದ್ದಾಗ ಅವರು ಹೆಗಲಿತ್ತು
ಅಷ್ಟರಲ್ಲೇ ಸ್ವರ್ಗ ನರಕಗಳನ್ನು ಕಾಣುತ್ತ
ಬದುಕಿನೊಪ್ಪತ್ತನ್ನು ಎಪ್ಪತ್ತು ವರ್ಷ
ದಿನ ದಿನ, ಕ್ಷಣ ಕ್ಷಣ, ಹೀರಿ ಬಾಳುವ ಮಾಮೂಲಿನವರು.

ಊರ ತುಂಬ ಒಂದರ ಸಂಧಿವಾತದಲ್ಲಿನ್ನೊಂದು
ಊರೆಯಾಗುವ ಹರಕು ಜೋಪಡಿ ಸಾಲು.
ಹುಯ್ಲ ಉಚ್ಚೆಗೆ ಕರಗಿ ಹರಿಯುವ ಪಾಳುಗೋಡೆಗಳು.
ಮಂಗಗಳ ಹಾವಳಿಗೆ ಮಳೆಗಾಲದುದ್ದಕ್ಕು ಗೊಳೊ ಎಂದತ್ತು
ಬೇಸಿಗೆಯಲ್ಲಿ ಬೆಂಕಿ-ಚೇಳುದುರಿಸುವ ಮುರುಕು ಹೆಂಚಿನ ಸೂರು.
ಒಟ್ಟಾರೆ, ಊರು ನೋಡಲು ಬರುವ ಭಾನುವಾರದ ತಂಡ
ಬಣ್ಣಬಣ್ಣದ ಚಿತ್ರ ತೆಗೆಯಬೇಕೆನ್ನಿಸದ
ಬೊಂಬು- ಮಣ್ಣಿನ ಕ್ಷಯಗ್ರಸ್ತ ಎದೆಗೂಡುಗಳ ರಾಶಿ.
ಶೌರ್ಯ, ಕ್ರೌರ್ಯ, ಪರಮಾರ್ಥಗಳನ್ನು ಬೇಡದೆಯೆ

ಸಾದಾ, ಸಾಚಾ ಬದುಕು ನಡಸಿದ್ದಕ್ಕೆ
ಇದೆಯೆ ಬಹುಮಾನವೆಂಬಂತೆ
ಕಾಲ ನಿರ್ಮಿಸಿಹೋದ ಭವ್ಯ ಸ್ಮಾರಕ— ಊರು.

೧೯೮೨

ಪ್ರಕ್ರಿಯೆ

ಬೇಲೂರು- ಹಳೆಬೀಡು.
ಹಳೆಯ ಗುಡಿಗಳ ಒಳಹೊರಗೆಲ್ಲ ಸುತ್ತಾಡಿ
ಒಂದೊಂದು ಕೆತ್ತನೆಯನ್ನೂ
ಕಣ್ಣಲ್ಲಿ ಕಣ್ಣಿಟ್ಟು ನೋಡಿ ಕೊಂಡಾಡಿ
ಕೊನೆಗೆ ಹೊರಬರುವಾಗ ಜತೆಯ ಗೈಡನ್ನು ಕೇಳಿದೆ –
"ಏನಯ್ಯಾ, ಇದೆಲ್ಲ ಕಪ್ಪುಬಳಪದ ಕಲ್ಲೆ?"

ನಗುತ್ತ ಅವನಂದ –
"ಅಲ್ಲಾ ಸಾರ್, ಇದೊಂದು ಜಾತಿಯ ಜೇಡಿಮಣ್ಣು.
ಇದರ ಗಣಿಯಿರುವುದು ನೆಲದಾಳದಲ್ಲಿ.
ಅಗೆದು ಮೇಲೆತ್ತಿ ತೆಗೆದರೆ
ರಾತ್ರಿನ್‌ರಾತ್ರಿ ಆರಿ
ಮೇಣಗಲ್ಲಾಗುತ್ತೆ.
ಎರಡು ದಿನ ಬಿಟ್ಟರೆ
ಕೆತ್ತಲಾಗದ ಕಬ್ಬಂಡೆಯಾಗಿಬಿಡುತ್ತೆ."

ವ್ಹಾ, ಅವನು ಹೇಳಿದ್ದೇನು ಪ್ರಾಕೃತಿಕ ಸತ್ಯವೆ?
ತಲತಲಾಂತರದಿಂದ ಬಂದ ದಂತಕತೆಯೆ?
ಅಥವಾ ನನ್ನಂಥ ಮರುಳ ಪ್ರವಾಸಿಗಳಿಗಾಗಿ
ಸೃಷ್ಟಿಸಿದ ಸ್ವಕಪೋಲ ಕಲ್ಪಿತವೊ?

ಏನೇ ಇರಲಿ, ಕೊಂಚ ಬೆದಕಿ ನೋಡಿದರೆ

ಹುಟ್ಟಿಂದ ಬಂದ ನಮ್ಮೊಳಗಿನ ಅದೇನೋ
ವಯಸ್ಸು ಮಾಗಿ ಬುದ್ಧಿ ಬೆಳೆದಂತೆಲ್ಲ
ಹಾದಿ ಧೂಳಿಗೆ, ಬೀದಿ ಗೋಳಿಗೆ
ಹೊಟ್ಟೆಯಾತುರಕೆ, ದೇಹದಾಲಸ್ಯಕ್ಕೆ
ಹಗಲ ತುರಿತಕ್ಕೆ, ರಾತ್ರಿ ಹಾದರಕೆ
ಚೌರ್ಯಕ್ಕೆ, ಕ್ರೌರ್ಯಕ್ಕೆ, ಭಂಡಧೈರ್ಯಕ್ಕೆ
ಏನೂ ಇಲ್ಲದ್ದಕ್ಕೆ, ಎಲ್ಲ ಇದ್ದದ್ದಕ್ಕೆ

ಪಕ್ಕಾಗಿ
ಹಸಿಯಾಗಿದ್ದದ್ದು ಗಡಸಾಗುತ್ತ ಆಗುತ್ತ
ಕೊನೆಗೆ ಕಡೆಯಲಾಗದ
ಕಡೆದರೂ ಶಿಲ್ಪವಾಗದ
ನೋವು ತಟ್ಟದ, ಸೂಕ್ಷ್ಮ ಊರದ
ಕಗ್ಗಲ್ಲಾಗುವ ಪ್ರಕ್ರಿಯೆಗೆ

ಎಂಥ 'ಬ್ಯೂಟಿಫಲ್ ಮೆಟಫರ್' ಅಂತೀರ!

೧೯೮೫

ಹೆಂಗಸರನ್ನು ಕುರಿತು
ಜತೆ ಗಂಡಸರಿಗೊಂದು ಕಿವಿಮಾತು

ಹೆಂಗಸರು ನನಗೂ ಇಷ್ಟ
ನಿಮ್ಮೆಲ್ಲರಂತೆ
ನಾನೂ ಗಂಡಾದ್ದರಿಂದ.
ಮೇಲೆ ಇನ್ನೂ ಕೆಲವು ಕಾರಣಕ್ಕಾಗಿ.

ಅವರು ನಮಗಿಂತ ಹೆಚ್ಚು ಸಂಗಜೀವಿಗಳು.
ಇವತ್ತು ಅಮಾವಾಸ್ಯೆ, ನಾಳೆ ಹುಣ್ಣಿಮೆ ಎಂದೇನೇನೊ ನೆಪ ಹುಡುಕಿ
ಒಂದಲ್ಲ ಒಂದು ಕಡೆ ಗುಂಪುಗೂಡುತ್ತಾರೆ.
ನಾವು ನಾಲ್ಕುಜನ ಗಂಡಸರು ದುಂಡುಮೇಜಿನ ಸುತ್ತ
ಕೂರುವಷ್ಟೇ ಜಾಗದಲಿ ಅವರು ತಮ್ಮೆಲ್ಲ
ತಿಸರ- ಮತ್ಸರಗಳನ್ನು ಸೊಂಟಪಟ್ಟಿಯಲಿ ಕಟ್ಟಿಟ್ಟು
'ಅಯ್ಯೋ, ಇಲ್ಲೇ ಬನ್ನಿ' ಎಂದು ಅಕರಾಸ್ತೆ ತೋರುತ್ತ
ತೊಡೆಗೆ ತೊಡ ಹಚ್ಚಿ, ತಮ್ಮ ಹತ್ತುದೇಹಗಳನ್ನು ನೆಲಕ್ಕೂರುತ್ತಾರೆ.

ಅಲ್ಲ, ನೆಲದೊಡನೆ ಎಂಥ ಹೊಕ್ಕಳ ನಂಟು
ಈ ಭೂತಾಯಿ ಮಕ್ಕಳದು! ನನಗೆ ನೆನಪಿದೆ :
ನಮ್ಮಮ್ಮ, ನಮ್ಮಜ್ಜಿ ಎಂದೂ ಕುರ್ಚಿ ಕಂಡವರಲ್ಲ
ನೆಲದ ಮೇಲೇ ಅವರು ಜನ್ಮ ತಳೆದದ್ದು, ಜನ್ಮ ಕಳೆದದ್ದು,
ಹತ್ತು ಹೆತ್ತು ಸಂಸಾರ ಬೆಳಸಿದ್ದು.
ಹಾಗೇ ಅವರೆಂದೂ ಚಪ್ಪಲಿ ಷೂಸ್ ಮೆಟ್ಟಿದವರಲ್ಲ

ಬರಿಗಾಲಲ್ಲೇ ಗುಡಿಜಾತ್ರೆಗಳಿಗೆ ನಡೆದು
ನೆಲ ಸವೆಸಿದವರು.

ಸೇರಿದ್ದೆ ತಡ, ಈ ಹೆಂಗಸರು ಮಾತಿಗಿಳಿಯುತ್ತಾರ.
ಅದದೇ ಮಾತು, ಒಮ್ಮೆಲೇ. ಒಟ್ಟಿಗೆ.
ಎಲ್ಲ ಒಟ್ಟಾಗಿ ಅರ್ಥ ಸಹ ಮಾಡಿಕೊಳ್ಳುತ್ತಾರೆ.
ಏನು ಆ ಮಾತು ? ನಾವು ಗಂಡಸರು ಜಗತ್ತಿನ
ಎಲ್ಲ ಆಗುಹೋಗುಗಳ ಹೊಣೆ ಹೊತ್ತು, ಆ ಭಾರದ ತಾಪ ತಂಪಾಗಿಸಲು
ಐಸ್ ಬೆರಸಿ ಸ್ಕಾಚಿನ ಮೇಲೆ ಸ್ಕಾಚ್ ಹೀರುತ್ತ
ಧರ್ಮ-ಇತಿಹಾಸ, ಸಮಾಜ-ಸಾಹಿತ್ಯ, ಕ್ರಾಂತಿ-ಭ್ರಾಂತಿ
ಎಂದು ಘನಂದಾರೀ ವಿಷಯಗಳ ತೆಗೆದು ದನಿಯೆತ್ತಿ

ನಮ್ಮ ಚರ್ಚೆಗೆ ಕನ್ನಡ ಸಾಲದೆಂಬಂತೆ ಇಂಗ್ಲಿಷ್ ಬೆರಸಿ
ಮೇಜು ಕುಟ್ಟುತ್ತ, ಕಿತ್ತಾಡುತ್ತ, ಕಿರಚಿರುವಾಗ
ಅವರೋ, ಯಾರ ಮನೆಯಲ್ಲಿ ಏನಡಿಗೆ ?
ಯಾವ ಗೊಜ್ಜಿಗೆ ಎಷ್ಟು ಹುಳಿ, ಉಪ್ಪು ? ಒಗ್ಗರಣೆ ಯಾವದು ?
ಯಾರಿಗೆ ಮದುವೆ, ಎಷ್ಟು ಮಕ್ಕಳು, ಮತ್ತಾರು ಬಸುರಿ ?
ಹೆರಿಗೆ ಯಾವಾಗ ? ಸೀರೆ ಹೊಸದೆ ? ಏನೊಡವೆ ಮಾಡಿಸಿದಿರಿ ?
ಎಂದು ಅವೇ ಬದುಕಿನ ಸರ್ವಸ್ವವೆಂಬಂತೆ
ಪರಪರ ಹರಟುತ್ತಾರೆ.

ಹೌದು, ಸ್ವಾಮಿ. ಯೋಚಿಸಿ ನೋಡಿದರೆ ಅವೇ ಸರ್ವಸ್ವ.
ಅವರ ಅಡಿಗೆ -ಊಟ, ಮದುವೆ -ಮಕ್ಕಳು, ಒಡವೆ -ಬಟ್ಟೆ,
ಅರ್ಥಾತ್ ನಾವು ಬುದ್ಧಿಜೀವೀ ಗಂಡಸರ ಉದ್ಬುದ್ಧ ವಿದ್ವದ್ಭಾಷೆಯಲಿ
ಅನ್ನ, ಸಂತಾನ, ವಸ್ತ್ರ, ವಿತ್ತ ಬದುಕಿನ ಮೂಲಭೂತಗಳು.
ಮಕ್ಕಳು ಹೆರುವಂತೆ ಹೆಣ್ಣಿಗಷ್ಟೇ ಅದು ಸುಲಭ. ಸಾಧ್ಯ.
ಅವು ಸಲೀಸಿದ್ದಾಗ ಮಾತ್ರ ನಮ್ಮ ದಾರಿ ನಡೆವುದು ನೇರ.

ಇನ್ನು ನಮ್ಮ ವಾದಾಂಶಗಳೋ, ಚರ್ಚೆಪೆಟ್ಟಿಗ ಬಗ್ಗದೆಯೆ
ಮೇಲೆ ಬದಲಾದಂತೆ ತೋರುತ್ತ ಇದ್ದಂತೆಯೇ ಇರುವಂತಹವು.

ಅದಕ್ಕೇ ನಾನನ್ನುವುದು – ಹೆಣ್ಣು ಹೆಣ್ಣಾಗಿರಲಿ,
ತಾಯಾಗಿ, ಮಗಳಾಗಿ, ಮನೆಯೊಡತಿಯಾಗಿ,
ಸೋದರಿಯಾಗಿ, ಸೊಸೆಯಾಗಿ, ಜತೆಗಾತಿಯಾಗಿ,
ಬದುಕಿನ ಸಾರ್ವಭೌಮಳಾಗಿ.

೧೯೯೫

ಈರುಳ್ಳಿ ಮೀಮಾಂಸೆ

ನನ್ನಮಿತ್ರ ಅನಂತು
ಮಾತಿನಲ್ಲಿ ಮಹಾಚತುರ.
ವಾದ ಅವನ ಬದುಕ ಜೀವಾಳ.
ನಮಗೋ ಅದು ಗಂಟಲ ಗಾಳ.

ಅವನ ಇಸ್ಪೀಟ್.ಪ್ಯಾಕಲ್ಲಿ
ತುರ್ಪುಗಳು
ಒಂದಲ್ಲ, ಎರಡಲ್ಲ
ಪೂರಾ ಐವತ್ತೆರಡು.

ವಾದದ ಧಾಟಿಗೆ ತಕ್ಕಂತೆ
ಒಂದೊಂದನ್ನೇ ಎಳೆಯುತ್ತಾನೆ
ಅದರ ಕೆನ್ನೆ ಸವರುತ್ತಾನೆ,
ಚಿಮ್ಮುತ್ತಾನೆ, ಬಿಮ್ಮುತ್ತಾನೆ.

ಅದು ಎದುರಾಳಿಯ ಜೀರ್ಣಾಗ್ನಿಗೆ
ದಕ್ಕುವ ಮೊದಲೇ
ಮುಂದಿನ ವಾದಕ್ಕೆ ಜಿಗಿದಿರುತ್ತಾನೆ–
ಅದೊ, ಬಿತ್ತು ಮತ್ತೊಂದು ತುರ್ಪು!

ಗೆಳೆಯ ಯು. ಆರ್. ಅನಂತಮೂರ್ತಿಯ ೬೩ನೆ ಹುಟ್ಟುಹಬ್ಬದಂದು (೨೧ ಡಿಸೆಂಬರ್ ೧೯೯೫) ಚೇಷ್ಟೆಗೆ ಉಡುಗೊರೆಯಾಗಿ ಬರೆದು ಕೊಟ್ಟದ್ದು.

ಮೊನ್ನೆ ನಾನು ಏನೋ ಹೇಳಿದ್ದಕ್ಕೆ
ಕೊನೆಮಾತಾಗಿ ಅವನಂದ:
'ಬಿಡೊ, ಬಿಡೊ, ನಿನ್ನ ಮಾತಲ್ಲಿ ಹುರುಳಿಲ್ಲ,
ಈರುಳ್ಳಿಯಿದ್ದಂತೆ ಅದು.'

ದಂಗಾದೆ: ಈರುಳ್ಳಿಗೆ ಹುರುಳಿಲ್ಲ!
ಯಾರು ಕಾಣರು ಈರುಳ್ಳಿಯನ್ನ?
ಅದರ ಹುಳಿ, ಚಟ್ನಿ, ಪಕೋಡ,
ಮತ್ತೆ ದೋಸೆ ನನಗೂ ಪ್ರಿಯವೇ.

ಆದರೆ ಮೂರ್ತಿಯ ಚಿತ್ತ ಚಾಪಲ್ಯ–
ಈರುಳ್ಳಿ ಹುರುಳ ಹುಡುಕಲು ಹೋಗಿ
ಅದರ ಬಸಿರ ಬಗೆವಾಟ– ನನಗೆ ಹೇಳಿದ್ದಲ್ಲ.
ಒಟ್ಟಂದ, ರುಚಿಗಳಷ್ಟೇ ನನಗಿಷ್ಟ.

ಆದರೂ ಒಂದು ಕೈ ನೋಡೋಣವೆಂದು
ಇವಳು ಇಲ್ಲದ ಹೊತ್ತು
ಒಳಗಿಂದೊಂದು ಈರುಳ್ಳಿ ತಂದು
ಮೈಗಣ್ಣಾಗಿ ಬಿಡಿಸತೊಡಗಿದೆ.

ಮೊದಲು ಕೆಂಪನೆಯ ತೆಳು ಸಿಪ್ಪೆ
ಆ ಮೇಲೆ ಕೊಂಚ ಕೊಂಚ ಸಣ್ಣದಾಗುತ್ತ
ಹೋಗುವ ಬಿಳಿ ಎಸಳುಗಳು ಏಳೆಂಟು
ಒಂದರಲ್ಲಿನ್ನೊಂದು– ಚೈನೀಸ್ ಬಾಕ್ಸ್ ಇದ್ದಂತೆ.

ಬಿಡಿಸುತ್ತ ಹೋದಂತೆಲ್ಲ
ಕಣ್ಣಲ್ಲಿ ಮೂಗಲ್ಲಿ ಉರಿ, ನೀರು,

ಸೀನುಗಳ ಚಿನಕುರಳಿ
ಮೇಲೆ, ಅದೇನೋ ತಲೆಭಾರ.

ಕೊನೆಗೂ ಕೊನೆಯೆಸಳಿಗೆ ಬಂದಾಗ
ಉಸಿರು ಬಿಗಿ ಹಿಡಿದು, ಕಣ್ಣು ಕೆಕ್ಕರಿಸಿ
ಕಂಬದೊಳಗಿನ ಗುಂಬಕ್ಕೆ ಕಾದಿದ್ದಕ್ಕೆ
ಪಿಸ್ಸೆ! ಅಲ್ಲಿ ಬರಿ ಖಾಲಿ.

ಏನು, ಅನಂತು ಹೇಳಿದ್ದು ನಿಜವೆ?
ಈರುಳ್ಳಿಗೆ ಹುರುಳಿಲ್ಲವೆ?
ತಾಳಿ, ಅದು ಸತ್ಯದ ಒಂದು ಮುಖ ಮಾತ್ರ.
ಇನ್ನೊಂದುಃ ವಾದದಾಚೆಯ ಅನುಭವದ ಮಾತು.

ಹುರುಳು ಕೇಂದ್ರದಲ್ಲೇ ಇರಬೇಕೆಂದು
ಅದಾವ ಬ್ರಹ್ಮ ಬರೆದಿಟ್ಟಿದ್ದಾನೆ!
ಕಾಣೆವೇ ನಾವು, ಈರುಳ್ಳಿ ಹುರಿದ ದಿನ
ಅದರ ನಾತ, ಘಾಟುಗಳ ಗಮ್ಮತ್ತು–

ಹುರಿದ ಪಾತ್ರೆಯಲಿ, ಉಂಡ ಬಾಯಲ್ಲಿ,
ಕೈಯಲ್ಲಿ, ಮೈಯಲ್ಲಿ,
ಉಚ್ಚೆಯಲಿ, ಹೂಸಿನಲಿ, ತೇಗಿನಲಿ
ಇಡೀ ಮನೆಯಲ್ಲಿ, ಕೊನೆಗೆ ಕೇರಿಯಲ್ಲೆಲ್ಲ.

ಭಗವಂತನ ಬ್ರಹ್ಮಾಂಡವಿದ್ದಂತೆ
ಅದರ ವಾಮನಾವತಾರ ಈ ಪಲಾಂಡು.
ಅದರ ಜೀವಜೀವಾಳದಲ್ಲಿ,
ಬ್ರಹ್ಮ ಕಾಣಿಸದೆ ಹೋದರೇನಂತೆ

ಅಣುರೇಣು, ತೃಣಕಾಷ್ಠಗಳಲ್ಲಿ,
ಕಣಕಣಗಳಲ್ಲಿ ತಾನಿರುವುದಾಗಿ
ವಾಸನೆ ಬೀರಿ ಸಾರುತಿದೆ
ಈರುಳ್ಳಿ ರೂಪದಲಿ ಬ್ರಹ್ಮ ಬಂದು.

ಮತ್ತೆ ಸಿಕ್ಕಾಗ ಅನಂತುವಿಗೆ ತಿಳಿಸಬೇಕು
ಸತ್ಯದ ಈ ಇನ್ನೊಂದು ಮುಖ.
ಆದರೆ ಗೊತ್ತು, 'ಬಿಡೊ, ನಿನಗದು ಅರ್ಥವಾಗಿಲ್ಲ'
ಎಂದು ನುಣುಚಿಕೊಳ್ಳುತ್ತಾನೆ ಆ ಘಾಟಿ ಮೀನು!

೧೯೬೫

ತಡೆಯದಾದಾಗ

ನಗಬೇಕು
ನಗೆ ತಡೆಯದಾದಾಗ,
ಬೆಳಗಾಗ ಎಳೆಬಿಸಿಲಲ್ಲಿ ಹೂ ಅರಳಿದಂತೆ.
ನಕ್ಕುಬಿಡಬೇಕು
ಜತೆಯ ಗಿಡಮರಗಳ ಜತೆಗೆ ಒಂದಾಗಿ
ಚೈತ್ರದ ಹಗಲು ಉದ್ಯಾನಕ್ಕೆ ಉದ್ಯಾನವೇ ನಗುವಂತೆ.

ಅಳಬೇಕು
ಅಳು ಒತ್ತಿ ಬಂದಾಗ.
ರಾತ್ರಿ ಕತ್ತಲ ಮೌನ ಮುಸಿ ಮುಸಿ ಅಳುವಂತೆ
ಅತ್ತುಬಿಡಬೇಕು
ಏಕಾಂತದಲಿ ಒಬ್ಬನೇ ಇರುವಾಗ
ನಡುರಾತ್ರಿ ಊರ ಹೊಳೆ ತಾನೊಂದೆ ಅಬ್ಬರಿಸಿ ಅಳುವಂತೆ.

೧೯೯೫

ಅಸ್ತಿತ್ವ

ಬೆಟ್ಟ
ನಿಂತು ನಿಂತು ಸುಸ್ತಾಗಿ
ಮೇಲಿಂದ ಬಿದ್ದು ಸಾಯೋಣವೆಂದರೆ
ಅದಾವ ಬೆಟ್ಟವನ್ನರಸಿಕೊಂಡು ಹೋಗಬೇಕು ?

ನದಿ
ಹರಿದು ಹರಿದು ಸುಸ್ತಾಗಿ
ಮುಳುಗಿ ಸಾಯೋಣವೆಂದರೆ
ಅದಾವ ನದಿಯನ್ನರಸಿಕೊಂಡು ಹೋಗಬೇಕು ?

ಬೆಂಕಿ
ಉರಿದುರಿದು ಸುಸ್ತಾಗಿ
ಕಿಚ್ಚಲ್ಲಿ ಹಾರಿ ಸಾಯೋಣವೆಂದರೆ
ಅದಾವ ಬೆಂಕಿಯನ್ನರಸಿಕೊಂಡು ಹೋಗಬೇಕು ?

ಬೆಟ್ಟ - ನದಿ - ಬೆಂಕಿ
ಕೆಲವೊಂದಕ್ಕೆ
ಅವುಗಳ ಬದುಕೇ ಸಾವು,
ಅಸ್ತಿತ್ವವೇ ಮೋಕ್ಷ.

೧೯೯೫

ನಗರ ಮತ್ತು ಚಂದ್ರ

ಹುಣ್ಣಿಮೆಯ ತುಂಬು ಚಂದಿರ
ನೋಡಲು ತುಂಬ ಸುಂದರ.

ಕಾರ್ತಿಕದ ರಾತ್ರಿ
ನೀಲಿಯಾಕಾಶದಲ್ಲಿ
ಲಕ್ಷನಕ್ಷತ್ರಗಳ ನಡುವೆ
ಅವನು ಹೂಡುವ ದರ್ಬಾರು
ಸೂರ್ಯನಿಗೂ ಕಣ್ ಕಿಸಿರು.

ತಿಂಗಳ ಬೆಳಕಿನಲ್ಲಿ
ಹಳ್ಳಿಯ ಹೊಳೆಕರೆಯ ಮರಳು
ನುಣ್ಣನೆಯ ಬೆಳ್ಳಿ ತರಿ.
ಮದುವೆಯ ಹೊಸದರಲ್ಲಿ
ಇವಳ ಕೈಯಲ್ಲಿ ಕೈಯಿಟ್ಟು
ಅವನನ್ನೇ ನೋಡುತ್ತ ಕೂರುತ್ತಿದ್ದದ್ದು
ಈಗ ಸಿನಿಮಾಕ್ಕಷ್ಟೇ ಸರಿ.

ಈಚೆಗೆ ಈ ನಗರಕ್ಕೆ ಬಂದ ಮೇಲೆ
ನಾವು ಚಂದ್ರನನ್ನು ನೋಡಿದ್ದೇ ಇಲ್ಲ.
ನಮ್ಮ ಹೊಸ ಬಡಾವಣೆಗಳಲ್ಲಿ
ಮನೆಗಳು
ಅವನ ಶಿಕಾರಿಗೇ ಹೊರಟಂತೆ

ಅಂತಸ್ತಿನ ಮೇಲೆ ಅಂತಸ್ತು
ಏರೇರುತ್ತ ಹೋಗಿ
ನಗರದ ಬೀದಿಗಳು
ಸಂದಿಗೊಂದಿಗಳಾಗುತ್ತಿವೆ.

ಈ ಗಲ್ಲಿಗಳಲ್ಲಿ
ಆಕಾಶ
ನಮ್ಮ ಮಾನ ಮುಚ್ಚಲಾರದ
ಪಟ್ಟಿಲಂಗೋಟಿ.
ಇಲ್ಲಿ ಕೆಳಗೋ
ಸದಾ ಮಂಜುಗತ್ತಲು.
ಹಗಲ ಬೆಳಕು, ಸಂಜೆಯ ಗಾಳಿ
ಶ್ರಾವಣದ ಮಳೆ, ಶರತ್ತಿನ ಶೀತಲ ಸ್ಪರ್ಶ
ಈ ಎಲ್ಲ ದೇವರ ಕರುಣೆ
ಇಲ್ಲಿ ಸೋರಿ ಸೋರಿ ಬರುತ್ತದೆ –
ನಮ್ಮ ಪಾಲಿನ ಭಾಗ್ಯವಿದ್ದಂತೆ.

ಹುಣ್ಣಿಮೆಯ ರಾತ್ರಿ
ಈ ಸಂದಿಗೊಂದಿಗಳಲ್ಲಿ ನಡೆದಾಡುವಾಗ
ಇದ್ದಕ್ಕಿದ್ದಂತೆ ಬೀದಿ ದೀಪ ಹೋದರೆ
ಬೆಳಕ ಬಯಸಿ
ಕತ್ತೆತ್ತಿ ಚಂದ್ರನನ್ನು ಹುಡುಕುವ ಪ್ರಯತ್ನ
ಜೀವಕ್ಕೆ ಗಂಡಾಂತರ.
ಏಕೆಂದರೆ, ಇಲ್ಲಿ ದಾರಿಯುದ್ದಕ್ಕೂ
ಹಳ್ಳ ಕೊಳ್ಳ, ದಿಣ್ಣೆ ತಿಟ್ಟು, ತಿಪ್ಪೆಗುಂಡಿ
ಅಡ್ಡಾದಿಡ್ಡ ಕೂತ ಗೂಳಿಬಂಡೆಗಳು.
ಆಗ ಬೀಡಿಅಂಗಡಿಗಳ ಮಿಣುಕುದೀಪಗಳು

ಕಾರು ಸ್ಕೂಟರುಗಳ ಹೆಡ್ ಲೈಟ್‌ಗಳು
ಸಿಗರೇಟ್ ತುದಿಯ ಉರಿಬೆಳಕು—
ಇವೇ ನಮಗೆ ದಾರಿದೀಪಗಳು.

ಚಂದ್ರ ನಗರಕ್ಕೆ ಹೇಳಿದ್ದಲ್ಲ.
ಆ ಹಳೆಗೊಡ್ಡು
ಏನಿದ್ದರೂ ಹಳ್ಳಿಗೇ ಸರಿ.

೧೯೬೭

ನಾರ್ಸಿಸಸ್ ಮತ್ತು ಮಾನಿಕಿನ್

ಬೆಂಗಳೂರಿನ ಮಹಾತ್ಮಗಾಂಧಿ ರಸ್ತೆ.
ಒಂದು ದೊಡ್ಡ ಗಾರ್ಮೆಂಟ್ಸ್ ಶಾಪು.
ಅಂಗಡಿಯ ಅಗಲಕ್ಕೂ ಚಾಚಿದ
ಅಷ್ಟೇ ದೊಡ್ಡ ಗಾಜಿನ ಶೋಕೇಸು.
ಶೋಕೇಸಿನಲ್ಲಿ ಒಬ್ಬ ಚೆಲುವೆ ಹುಡುಗಿ
ಜೀವಂತ ನಿಂತಿದ್ದಾಳೆನ್ನುವಂತಹ – ಮಾನಿಕಿನ್.

ಅಂಗಡಿಯ ಮುಂದೆ ಓಡಾಡುವ ಜನ ನೂರಾರು.
ಅವರಲ್ಲೊಬ್ಬ ನವತರುಣ – ಆತ್ಮರತ ನಾರ್ಸಿಸಸ್.
ಶೋಕೇಸ್‌ನೊಳಗೇ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದಾನೆ.
ನೋಡನೋಡುತ್ತ ಜೇಬಿಂದ ಬಾಚಣಿಗೆ ತೆಗೆದು
ತಲೆಕೂದಲು ನೇವರಿಸಿಕೊಳ್ಳುತ್ತಾನೆ,
ಅವಳನ್ನೇ ಮೆಚ್ಚಿಸ ಹೊರಟಂತೆ.

ಐದು ನಿಮಿಷ, ಹತ್ತು ನಿಮಿಷ.
ಕಾಲ ಸರಿಯುತ್ತದೆ, ಹುಡುಗ ಸರಿಯುವುದಿಲ್ಲ.
ಥಟ್ಟನೆ ಮೂಕಿ ಮಾನಿಕಿನ್
ಜೀವ ತಾಳುತ್ತಾಳೆ.
ಕಣ್ಣು ಮಿಂಚುತ್ತದೆ, ತುಟಿ ಅದುರುತ್ತದೆ.
ನಾಚುತ್ತ ಹೇಳುತ್ತಾಳೆ –

"ಥ್ಯಾಂಕ್ಸ್, ನನ್ನನ್ನು ಯಾರೂ ಹೀಗೆ ನೋಡಿದ್ದೇ ಇಲ್ಲ.

ಕೊನೆಗೆ ನೀವೊಬ್ಬರಾದರೂ ಬಂದಿರಲ್ಲ.''
ಹುಡುಗನಿಗೆ ಎಚ್ಚರ ತಿಳಿಯುತ್ತದೆ, ತಬ್ಬಿಬ್ಬಾಗುತ್ತಾನೆ.
ಬಾಚಣಿಗೆಯನ್ನು ಜೇಬಿಗಿಳಿಸಿ, ಸಾವರಿಸಿಕೊಳ್ಳುತ್ತ ಹೇಳುತ್ತಾನೆ –
''ಸಾರಿ! ಏನಂದಿರಿ ? ನಿಮ್ಮ ಹಿಂದಿರೋ ಆ ಕನ್ನಡಿ
ಅದೆಷ್ಟು ಚೆನ್ನಾಗಿದೆ! ಅದಕ್ಕೆಷ್ಟೋ ಬೆಲೆ ?''

ಹಾಗಂದವನೇ ಹುಡುಗ ತನ್ನ ದಾರಿ ಹಿಡಿದು ಹೋಗುತ್ತಾನೆ.
ಹುಡುಗಿ ಮತ್ತೆ ಮೂಕಿ ಮಾನಿಕಿನ್ ಆಗಿಬಿಡುತ್ತಾಳೆ.

೧೯೯೭

ಅರವತ್ತರಾಚೆಯ ಸಂಗಾತಿಗೆ

ನಿನ್ನೆ ನೀರಿನ ಬಿಲ್ಲು ಕಟ್ಟಲು ಹೋಗಿದ್ದಾಗ
ರಸ್ತೆಯ ಗೌಜುಗದ್ದಲದ ನಡುವೆ
ಯಾರೋ ಕೈ ಹಿಡಿದು 'ತಾತ' ಅಂದದ್ದು ಕೇಳಿಸಿತು.
ನೋಡಿದರೆ ಒಬ್ಬ ಆರೇಳು ವರ್ಷದ ಹುಡುಗಿ
ಮುಖ ಕಂಡವಳೆ ಗಾಬರಿಯಿಂದ ಕೈ ಕೊಡವಿ ಓಡಿದಳು.
ಅವಳಿಗೂ ಹೆಚ್ಚು ಹೆದರಿ, ಬೆವರಿದವ ನಾನು –
'ತಾತ' ಎಂಬ ಆ ಅಪಶಬ್ದ ಕಿವಿಗೆ ಬಿದ್ದು.

ನೀರಿನ ಕಚೇರಿ ತಲಪುವಾಗ ಅಲ್ಲಿ ಮೈಲುದ್ದ ಕ್ಯೂ.
ಕೊನೆಗೂ ಮಧ್ಯಾಹ್ನ ಎರಡಕ್ಕೆ ಸರದಿ ಬಂದಾಗ
ಜೇಬಿಂದ ಹಣ ತೆಗೆದು ಕೊನೆಯ ಸಲ ಎಣಿಸತೊಡಗಿದೆ.
ಎಣಿಸಿದಷ್ಟೂ ಒಂದೆರಡು ರೂಪಾಯಿ ಹೆಚ್ಚು, ಇಲ್ಲ ಕಡಿಮೆ.
ಸಾಲಿನ ಹಿಂದೊಬ್ಬ ದಾಂಡಿಗ ಹುಡುಗ ಅರಚಿದ್ದ:
'ಬೇಗ ಮುಗಿಸೋ, ಏಯ್ ಮುದುಕ!' ಹೇಗೋ ಬಿಲ್ ಕಟ್ಟಿ
ಆ ಹುಡುಗನ ಪಡ್ಡೆಸೊಕ್ಕಿಗೆ ಮೈಕೈ ಅದುರತ್ತ ಹೊರಬಿದ್ದೆ.

ನಿನ್ನೆ ಮೊನ್ನೆಯವರೆಗೆ ಹೀಗಿರಲಿಲ್ಲ. ಅದೇಕೋ ದಣಿವು.
ಮಂಡಿ ನೋವು. ತುಂಬ ಹೊತ್ತು ನಿಂತಿದ್ದಕ್ಕಿರಬೇಕು.
ಸದಾ ಆ ಒಂದು ಫರ್ಲಾಂಗ್ ದೂರ ನಡೆದೇ ಮನೆಗೆ
ಬರುತ್ತಿದ್ದವನು ಬಸ್ಸು ಹತ್ತಿದೆ. ಅಲ್ಲೋ ನೂಕುನುಗ್ಗಲು.
ಆರಾಮ ಕೂತಿದ್ದ ನಡುವಯಸ್ಕನೊಬ್ಬ ನನ್ನ ಮುಖನೋಡಿ

ಪಕ್ಕದಲ್ಲಿದ್ದ ಮಗನಿಗೆ ಹೇಳಿದ: 'ಏಳೊ, ಅಜ್ಜಯ್ಯಂಗ
ಸೀಟು ಕೊಡೊ.' ಕೇಳಿಯೂ ಕೇಳದಂತಿದ್ದ ಆ ಘಾಟಿ ಹುಡುಗ.

ಮನೆಗೆ ಬಂದಾಗ ಅನ್ನಿಸಿತು – ಎಷ್ಟೇ ಟ್ರೆಂಡೀ ಟೀ-ಷರ್ಟ್,
ಬಣ್ಣಬಣ್ಣದ ಬರ್ಮುಡಾಸ್ ತೊಟ್ಟು ಮೆರೆದಾಡುತ್ತ
ಬಾರಿಂದ ಬಾರಿಗೆ ಜಿಗಿದು, ಹಗಲ್ಲೆಲ್ಲ ನೊರೆ ಬೀರು,
ಸಂಜೆ ಸ್ಕಾಚ್ ಹೀರುತ್ತ, ಜತೆಯ ಹುಡುಗ-ಮಿತ್ರರ ಖುಷಿಗೆ
ಪೋಲೀ ಜೋಕ್ ಮಾಡಿ ನನಗೆ ನಾನೇ ನಗಾಡಿದರೂ
ಅರವತ್ತರಂಚು ದಾಟಿದಂತೆಲ್ಲ
ಮುಪ್ಪು ತಪ್ಪದ ಬರುವ ಕಾಲನ ಕಾಳದೂತ.

ಅವನು ಬರುವುದು ನಡುಹಗಲು ಡಾಕುಗಳಂತೆ
ರಟ್ಟೆ ಹುರಿ ಮಿಂಚಿಸುತ ಮುಂಬಾಗಿಲೊಡೆದಲ್ಲ.
ಬದಲು ಚಿಟ್ಟೆಲಿಗಳಂತೆ, ಹಿತ್ತಿಲ ಕಂಡಿ ತೂರುತ್ತ
ಒಂದರ ಹಿಂದೊಂದು, ಕಂತು ಕಂತಾಗಿ.
ಮೊದಲು ಮಂಜುಗಣ್ಣಿಗೆ ಚಾಳೀಸ, ತಲೆಮರದ ಎಲೆ ಒಂದೊಂದೆ
ಉದುರಿ ಬೋಳಾದ ನೆತ್ತಿ. ಮುಖದ ತುಂಬಾ ಕೋಳಿಕಾಲ್ಗೀಚು.
ಸದಾ ಸುರಿವ ನಲ್ಲಿ ಮೂಗು. ಮೈಯ ಸಂದಿಗೊಂದಿಗಳಲ್ಲಿ ಸಂಧಿವಾತ,

ತೆತ್ತಷ್ಟೂ ಬೆಳೆವ ಡಾಕ್ಟರ ಬಿಲ್ಲು, ದುಡ್ಡಿನ ಗೂಡು ಔಷಧಿ ಗುಡ್ಡ–
ಹೀಗೇ ನೂರಾರು ಕಿರಿಕಿರಿ, ಕಿರಿದಾದದ್ದು ಹಿರಿದಾಗಿ
ಹಣ್ಣಿನೊಳಗಿನ ಕೀಟ ಘಟಸರ್ಪವಾಗಿ, ಸರೀಸೃಪವಾಗಿ
ಬದುಕ ಭೂಪಟವೆ ತಲೆ ಕೆಳಗು.
ಹಿಂದೊಮ್ಮೆ ಊರ ಹುಡುಗಿಯರಿಗೆಲ್ಲ ಹುಚ್ಚು ಹಿಡಿಸಿದ್ದ ಹರೆಯದ
ವರ್ಣರಂಜಿತ ಚಿತ್ರ ಇದೀಗ ದಿನಪತ್ರಿಕೆಯ ಮುಖಪುಟದ ವ್ಯಂಗ್ಯಚಿತ್ರ.
ಅದರ ಕಲೆಗಾರ ಬಾಳ ಕೊನೆಯ ಸಂಗಾತಿ.

ಬಾ ಗೆಳೆಯ, ನೀನೂ ಬಾ.
ಎಂದೂ ಎಲ್ಲರಿಗೂ ತೆರೆದಿಟ್ಟದ್ದೆ ತಾನೆ
ಈ ಬದುಕ ಬಾಗಿಲು!

೧೯೯೬

ಸಂಸ್ಕಾರ

ಆಗ ಜತೆಗಿದ್ದ ದಿವಂಗತ ಫ್ರೆಂಚ್ ಕವಿಮಿತ್ರ
ಕ್ಲೋದ್ ಎರ್ಪ್ರಿಯೋನನ್ನು ನೆನೆದು.

ಇಡೀ ದಿನ ಲೂವ್ರ್*ನಲ್ಲಿ ಸುತ್ತಾಡಿ
ಐದು ಸಾವಿರ ವರ್ಷಗಳ
ಜಗತ್ ಪ್ರಸಿದ್ಧ ಚಿತ್ರಶಿಲ್ಪಗಳನ್ನೆಲ್ಲ
ಬೆಕ್ಕಸ ಬೆರಗಾಗಿ ನೋಡಿ ಹೊರ ಬರುವಾಗ
ಅದೇಕೋ, ಊರಗುಡಿಯ ವಿಗ್ರಹಗಳದ್ದೇ ನೆನಪು.
ಹೊರಗೆ ಹೆಬ್ಬಾಗಿಲ ಎರಡೂ ಬದಿ
ಚೆಲ್ಲಿದೆ ರಾಶಿ ರಾಶಿ ಜಲ್ಲಿ ಕಲ್ಲು.
ಬಗ್ಗಿ ಒಂದನ್ನು ಕೈಗೆತ್ತಿಕೊಂಡು
ಉಜ್ಜಿನೋಡಿದರೆ
        ಅದೊಂದು
        ಪುಟ್ಟ
        ಅಮೂರ್ತ ಲಿಂಗ.

೧೯೮೬

*ಪ್ಯಾರಿಸಿನ ಹೆಸರಾಂತ ಮ್ಯೂಸಿಯಮ್

ನಿಸ್ವಾರ್ಥಿ ಜೀವ

ನಿಸ್ವಾರ್ಥಿ ಜೀವ
ಒಂದು ಕ್ಷಣವಾದರೂ
ತನಗಾಗಿ ಕಳೆದದ್ದೇ ಇಲ್ಲ.

ಆಯುಷ್ಯದರ್ಧ
ಅಪ್ಪನನ್ನು
ಟೀಕಿಸುವುದರಲ್ಲಿ

ಉಳಿದರ್ಧ
ಮಗನನ್ನು
ತಿದ್ದುವುದರಲ್ಲಿ

ಮುಗಿದಿತ್ತು.

೧೯೮೧

ಬೆಳವ ಕಲಿಸಿದ ಪಾಠ

ಒಂದು ಬೆಳಗ್ಗೆ
ಎಂದಿನಂತೆ ಮಹಡಿಯ ವರಾಂಡದ ಏಕಾಂತದಲ್ಲಿ
ಪೇಪರ್ ತಿರುವುತ್ತ ಕೂತಿದ್ದೆ.
ಕೆಳಗ ಅಂಗಳದ ಸೀಬೆಮರದ ಬಳಿ
ಕೆಂಗೂರಲಿನ ಬೆಳವ ಗುಟುರುವುದು ಕೇಳಿಸಿತು.
ಬೆಳವನ ಗಮನ ಸೆಳೆಯಲು 'ಹ್ಯ' ಅಂದೆ, 'ಹುಶ್' ಅಂದ.
ಸೇದುತ್ತಿದ್ದ ಸಿಗರೇಟ್ ತುಂಡನ್ನು ಅದರ ಕಡೆ ಚಿಮ್ಮಿದೆ.
ಆ ಮೊಂಡ ಕತ್ತೆತ್ತಿ ನೋಡಲಿಲ್ಲ.

ಬೆಳವನ ಗಮನವೆಲ್ಲ ನೆಲದ ಮೇಲಿತ್ತು.
ಗಾಳಿಗೆ ಹಣ್ಣೆಲೆ ತಿರುಗುವಂತೆ
ಗಿರ್ರನೆ ಬುಗುರಿ ತಿರುಗಿ
ನೇರ ನೆಲಕ್ಕಿಳಿದು, ಏನನ್ನೋ ಕಚ್ಚಿಕೊಂಡು
ಮತ್ತೆ ಮೇಲೆ ಹಾರಿ, ಎಲೆಗಳ ಸಂದಿ ಮರೆಯಾಯಿತು.
ಗೂಡುಕಟ್ಟಲು ಕಡ್ಡಿಯಿರಬಹುದು.
ಆಗಲೇ ಗೂಡುಕಟ್ಟಿ ಮೊಟ್ಟೆಯಿಟ್ಟು ಮರಿಗಳಾಗಿದ್ದರೆ
ಅವಕ್ಕೆ ಹುಳು ಕಾಳುಗಳಿರಬಹುದು.

ಆಗೊಂದು ಸತ್ಯ ಹೊಳೆಯಿತು –
ಹಕ್ಕಿ ಆಕಾಶವಾಸಿ.
ಆದರೂ ಅದು ಆಕಾಶದತ್ತ ನೋಡುವುದಿಲ್ಲ.
ಚಕೋರಕೆ ಚಂದ್ರಮ, ಮಳೆಹನಿಗೆ ಚಾತಕ

ಇವೆಲ್ಲ ಕೇವಲ ಕವಿಮನದ ಕಲ್ಪನಾವಿಲಾಸ.
ಹಕ್ಕಿಯ ಚಿಂತೆ
ಗೂಡಿನ ಕಡ್ಡಿಗಾಗಿ, ಆ ಹೊತ್ತಿನ ಕೂಳಿಗಾಗಿ.
ಅದಕ್ಕೆ ಆಕಾಶ ಆಹಾರವಲ್ಲ.

ಆದರೆ ಮನುಷ್ಯ –
ಅವನು ನೆಲದ ಮಗ.
ಆದರೂ ಅವನು ನೆಲ ನೋಡುವುದಿಲ್ಲ.
'ನೆಲ ನೋಡಿ ನಡೆ' ಎಂಬ ಹಿರಿಯರ ಮಾತು ಬರಿಯ ಬಾಯಿ ಚಪಲ.
ಅವನ ದೃಷ್ಟಿ ಒಳ-ಹೊರ ದಿಗಂತಗಳತ್ತ.
ಅವನು ತಡಕುವುದು, ಕನಸುವುದು, ಕವನಿಸುವುದು
ದೇವರು, ಆಕಾಶ, ಆಕಾಶದ ಸೂರ್ಯ-ಚಂದ್ರ-ನಕ್ಷತ್ರ,
ಹಕ್ಕಿ, ಮೋಡ, ಬೆಳಕು, ಕಾಮನಬಿಲ್ಲುಗಳ ಸುತ್ತಮುತ್ತ.

ಆಕಾಶವಾಸಿ ಹಕ್ಕಿ
ಇತ್ತ ನೆಲ ತಡಕುವುದು,
ನೆಲದ ಮಗ
ಅತ್ತ ಆಕಾಶ ಅರಸುವುದು –
ಈ ವಿರೋಧಾಕರ್ಷಣೆ
ನಮ್ಮನ್ನು ನಮ್ಮ ಪರಿಸರದಿಂದಲೇ
ದೂರವಿರಿಸುವ
ಸೃಷ್ಟಿಯ ದುಷ್ಟತಂತ್ರವಲ್ಲದೆ ಮತ್ತೇನು ?

೧೯೯೬

ರೋಗದ ಹೆಸರು

ಇವತ್ತು ಬೆಳಗ್ಗೆ ಎದ್ದಾಗಿನಿಂದ
ಅದೇಕೋ ಮಂಡಿನೋವು.
ಹೇಗೋ ಕುಂಟುತ್ತ ಹೊರ ಹೊರಟಿದ್ದನ್ನು ನೋಡಿ
ಕುಂಟೇಬಿಲ್ಲೆ ಆಡುತ್ತಿದ್ದ ಎಂಟು ವರ್ಷದ
ಮೊಮ್ಮಗಳು ಗಾಬರಿಯಿಂದ ಕೇಳುತ್ತಾಳೆ –
''ಯಾಕಜ್ಜ? ಏನಾಯ್ತು?''

ಏನಾಯ್ತೆಂದು ಹೇಳುವುದು?
ಈಚೆಗೆ ದಿನ ಬೆಳಗಾದರೆ
ಹೊಸದೇನಾದರೂ ಇದ್ದದ್ದೇ.
ಹಳೆ ಸಾಲ ತೀರದೆಯೆ
ದಿನವೂ ಕಾಸಿಗೆ ಕಾಸು ಬಡ್ಡಿ, ಚಕ್ರಬಡ್ಡಿ ಸೇರಿ
ಹನಿ ಹನಿ ಹಳ್ಳವಾಗಿ, ಹಳ್ಳ ಹೊಂಡವಾಗುತ್ತಿರುವಾಗ

ಏನಾಯ್ತೆಂದು ಹೇಳುವುದು?
ಎಲ್ಲ ಗೋಳಿಗೂ ಹೆಸರುಂಟೆ?
ಹೆಸರು ಹಚ್ಚಿದ ಮಾತ್ರಕ್ಕೆ
ಗೋಳಿನ ಆಳ, ಗಾತ್ರ ಅಳೆದು ತೋರಿಸಿದಂತಾಯ್ತು?
ಮತ್ತೆ ಕೇಳುತ್ತಾಳೆ ಹುಡುಗಿ –
''ಯಾಕಜ್ಜ? ಏನಾಯ್ತು?''

ಏನಾಯ್ತೆಂದು ಹೇಳುವುದು ?
ಹುಟ್ಟುಬುದ್ಧಿಗೆ ಅಂಟಿಬಂದದ್ದೊಂದೆ :
ಮಾತು. ಮಾತಿಗೆ ಮಾತು. ಚುರುಕುಮಾತು.
ಚತುರ ಉತ್ತರವೊಂದು ಥಟ್ಟನೆ
ತುಟಿಯ ತುದಿ ಬಂದು ನಿಲ್ಲುತ್ತದೆ –
"ಏನಿಲ್ಲಮ್ಮ, ಎಪ್ಪತ್ತಾಯ್ತು ಅಷ್ಟೇ."

ಹಾಗೆಂದು ಹೇಗೆ ಹೇಳುವುದು ಈ ಮಗುವಿಗೆ ?
ಹೇಳಿದರೂ ಅರ್ಥವಾಗುವ ಬಗೆ ಹೇಗೆ ?
ಅವಳ ಕುಂಟೇಬಿಲ್ಲೆ ಆಟದಲ್ಲಿ
ಮನೆಗಳು ಎಂಟೇ, ಎಪ್ಪತ್ತಲ್ಲವಲ್ಲ."

೧೯೯೭

‘ಬಿಡು, ಬಿಡು, ಬಿಡು’

ಈಗ ಎಲ್ಲ ರೋಗಕ್ಕೂ ಒಂದೇ ಮದ್ದು.
ಪಥ್ಯವೇ ತಥ್ಯ:
‘ಬಿಡು, ಬಿಡು, ಬಿಡು’ ಅನ್ನುತ್ತಾರೆ ಡಾಕ್ಟರು.
‘ತುಪ್ಪ ಬಿಡು, ಉಪ್ಪು ಬಿಡು, ಸಿಹಿ ಬಿಡು, ಕಹಿ ಬಿಡು.’
ಸದ್ಯ, ‘ಕೈ ಹಿಡಿದ ಹೆಂಡತಿಯನ್ನು ಬಿಡು’ ಎಂದು
ಇನ್ನೂ ಅವರಂದಿಲ್ಲ!

ಎಲ್ಲವನ್ನೂ ಬಿಡಹೋಗಿ
ಏನನ್ನೂ ಬಿಡಲಾಗದೆ
ಕೊನೆಗೊಂದು ತೀರ್ಮಾನಕ್ಕೆ ಬಂದಿದ್ದೇನೆ.
ಈ ಬದುಕಿನಲ್ಲಿ ಬಿಡಬಹುದಾದದ್ದು ಎರಡೇ –
ಒಂದು ಪ್ರಾಣ,
ಇನ್ನೊಂದು ಗಡ್ಡ!

೧೯೭೦

ನಮ್ಮಂಗಳದ ಬಾವಿಗಳು

ಬಿದ್ದು ಸಾಯಲು
ನೀರಿರುವ ಬಾವಿಗಳೇ
ಆಗಬೇಕೆಂದೇನಿಲ್ಲ.

ಹಾಗೆ ನೋಡಿದರೆ
ನೀರಿಲ್ಲದ ಬಾವಿಗಳಲ್ಲಿ
ಬಿದ್ದು ಸಾಯುವವರೇ ಹೆಚ್ಚು

ನನ್ನ ಕಾಲದಲ್ಲಿ
ಅನೇಕ ಹುಡುಗಿಯರು
ತಮ್ಮ ಮನೆಯ ನಾಲ್ಕು ಗೋಡೆಗಳೊಳಗೆ

ಉಟ್ಟ ಸೀರೆಯ ತಲೆಮುಸುಕಿನಲ್ಲಿ
ತೊಟ್ಟ ಬುರ್ಖಾಗಳೊಳಗೆ
ಹೀಗೆ ಅಪ್ಪಗಂಡಂದಿರು ತೋಡಿಟ್ಟ ಬಾವಿಗಳಲ್ಲಿ

ಸತ್ತೂ ಸಾಯದೆಯೆ
ಸಾಯದೆಯೆ ಸತ್ತದ್ದನ್ನ
ನಾನು ಕಂಡಿದ್ದೇನೆ!

೧೯೯೭

ಹಕ್ಕಿಗೂಡು

ನಮಗಿದ್ದದ್ದೊಂದು ಹಕ್ಕಿಗೂಡು
ನಾವೇ ಕೈಯಾರೆ ಕಟ್ಟಿದ್ದು.

ಅದರರ್ಧ ನೀ ಸುಟ್ಟೆ
ಉಳಿದರ್ಧ ನಾ ಸುಟ್ಟೆ.

ಅದಕ್ಕೆ ಮೊದಲು ಬೆಂಕಿಯಿಟ್ಟವರಾರೆಂದು
ಯಾರು ಹೇಳಬೇಕು ?

ಈ ಬೂದಿರಾಶಿಯಲ್ಲೆಲ್ಲೊ ಅಡಗಿರಬೇಕು
ಆ ಗುಟ್ಟು.

ನಮಗಿದ್ದದೊಂದೇ ಹಕ್ಕಿಗೂಡು!

೧೯೭೦

ಅಹಲ್ಯೆಗೊಂದು ಪ್ರಶ್ನೆ

ಕ್ಷಣದ ಚಪಲದ ಖುಷಿಗೆ ಕಾಲುಜಾರಿ
ಇಂದ್ರನ ಕಾಮಜಾಲಕ್ಕೆ ಬಿದ್ದ ಎಲೆ ಅಹಲ್ಯೆ,
ನಿನ್ನನ್ನು ಉಳಲಾರದೆ ಹೋದ
ಮುದಿಗಂಡ ಗೌತಮ
ಕಲ್ಲಾಗೆಂದು ಶಾಪಕೊಟ್ಟಾಗ
ಶಾಪಕ್ಕೂ ಹೆಚ್ಚು ಅದು ವರವಾಗಿತ್ತೆಂದು ಬಲ್ಲೆಯಾ ?

ಬದಲು, ಮಣ್ಣಾಗೆಂದಿದ್ದರೆ
ಎಂದೋ ಗಾಳಿಯಲ್ಲಿ ಚದುರಿ ಚೆಲ್ಲಾಡಿ ಹೋಗಿರುತ್ತಿದ್ದೆ.
ಆಗ ಯಾವ ದಾಶರಥಿರಾಮನ
ಪಾದಸ್ಪರ್ಶಕ್ಕೂ ಸಿಗದೆ
ನೀನು ಪುನರ್ಜೀವ ಪಡೆಯುತ್ತಿರಲಿಲ್ಲ,
ನಿರಂತರ ನಮ್ಮ ಪ್ರಾತಃಸ್ಮರಣೆಗೂ ಒದಗುತ್ತಿರಲಿಲ್ಲ.

ಹೇಳು, ನೀನೇನು
ಪಾಪಕ್ಕೆ ವಿಮೋಚನೆ ಇಲ್ಲದೇ ಇಲ್ಲ
ಎನ್ನುವುದಕ್ಕೆ ದೃಷ್ಟಾಂತವೆ ?
ಅಥವಾ ಲೋಕದಲ್ಲಿ
ಷಂಡಗಂಡರಿರುವವರೆಗೆ
ಕಳ್ಳಹಾದರ ತಪ್ಪಿದ್ದಲ್ಲ ಎನ್ನುವುದಕ್ಕೊ ?

೧೯೯೫

ಜನ್ಮಾಂತರ

ಹೂವು
ಗಾಳಿಯಲ್ಲಿ ಗಂಧ ಹರಡುತ್ತ ಹರಡುತ್ತ
ಕನಲುತ್ತದ
ಸೋತು ನೆಲಕ್ಕುರುಳುತ್ತದೆ.
ಗಂಧ
ಹೂವಿನ ಜೀವ, ಆತ್ಮ.
ಹೂಗಂಧ ಗಾಳಿಯಲ್ಲೇರಿ ಏರಿ
ಆಕಾಶದ ಬೆಳ್ಮೋಡವಾಗುತ್ತದೆ.

ಹೂ ಮೋಡ,
ಮೋಡ ಹೂ.

ಹೂ ಮೋಡಕ್ಕೆ
ತವರ ನೆನಪಾದಾಗ
ಅದು ಕೊರಗಿ ಕರಕಾಗಿ
ಕಾರ್ಮೋಡವಾಗುತ್ತದೆ, ಗುಡುಗುತ್ತದ
ಮಿಂಚಾಗಿ ಉರಿಯುತ್ತದೆ, ಸಿಡಿಲಾಗಿ ಅಬ್ಬರಿಸುತ್ತದೆ.
ಇನ್ನು ತಡೆಯದಾದಾಗ
ಮಳೆಯಾಗಿ
ಇಳೆಗಿಳಿಯುತ್ತದೆ.

ಮಳೆಯಲ್ಲೂ
ಹೂವಿನದೇ ಗಂಧ.

ಮಳೆ ನೀರು
ಒಣ ಬೀಜದ ಒಳಹೊಕ್ಕು
ಮೊಳಕೆ ಒಡೆಯುತ್ತದೆ.
ಸಸಿಯಾಗಿ, ಗಿಡವಾಗಿ, ಮರವಾಗಿ
ಅದರ ನರನಾಡಿಯಲ್ಲೆಲ್ಲ ಹರಿದಾಡಿ
ಎಲೆಯಾಗಿ ಚಿಗುರಿ, ಮೊಗ್ಗಾಗಿ ತುಂಬಿ
ಮತ್ತೆ ಹೂವಾಗಿ ಅರಳುತ್ತದೆ
ಹತ್ತೂ ಕಡೆ ಗಂಧ ಬೀರುತ್ತದೆ.

ಹೂವಿಗೆ
ಸಾವಿಲ್ಲ.
ಜನ್ಮಾಂತರದ
ಕಾವುನೋವುಗಳಷ್ಟೇ!

೧೯೭೧

ಸಿನಿಕ

‘‘ಮನೆಯಿದ್ದರೆ
ಆಸ್ಪತ್ರೆಯ ಬಗಲಲ್ಲಿರಬೇಕು.
ಆಸ್ಪತ್ರೆ
ಸ್ಮಶಾನದ ಬದಿಗಿರಬೇಕು.
ಆಗ ಎಲ್ಲ ಸಲೀಸು!’’ –

ಎಂದು ಗೊಣಗುತ್ತಿದ್ದೊಬ್ಬ ಸಿನಿಕ
ಪೂರಾ ಎಂಬತ್ತು ವರ್ಷ
ಉಂಡು, ತಿಂದು, ಬದುಕಿ, ಬಾಳಿ
ಕೊನೆಗೆ ಸತ್ತದ್ದು ಮನೆಯಲ್ಲೇ
ರಾತ್ರಿ ನಿದ್ದೆಯಲ್ಲಿ, ಸುಪ್ಪತ್ತಿಗೆಯ ಮೇಲಂತ!

೧೯೭೧

ಹಿಟ್ಲರ್-ಸ್ಟಾಲಿನ್‌ರ ರಾಜ್ಯದಲ್ಲಿ

ಔಸ್‌ವಿಚ್‌ನ ನರಯಜ್ಞದ ನೆನಪಿನ ಯಾತನೆ ತಡೆಯಲಾರದೆ ೧೯೮೭ರಲ್ಲಿ
ಆತ್ಮಹತ್ಯೆ ಮಾಡಿಕೊಂಡ ಇಟಲಿಯ ಸಾಹಿತಿ ಪ್ರೈಮೋ ಲೆವಿಯ ನೆನಪಿಗೆ.

ಯಾರಿಗೆ ತಿಳಿದಿತ್ತೊ
ಅವರು ಬಾಯಿ ಬಿಡುತ್ತಿರಲಿಲ್ಲ.

ಯಾರಿಗೆ ತಿಳಿದಿರಲಿಲ್ಲವೊ
ಅವರು ಏನಾಯ್ತೆಂದು ಕೇಳುತ್ತಿರಲಿಲ್ಲ.

ಏನಾಯ್ತೆಂದು ಕೇಳಿದವರಿಗೆ
ಉತ್ತರ ಸಿಗುತ್ತಿರಲಿಲ್ಲ.

ಉತ್ತರ ಹುಡುಕಿ ಹೊರಟವರಿಗೆ
ಸಿಗುತ್ತಿದ್ದದ್ದು–

ನಡುರಾತ್ರಿ ಬಂಧನ
ಗುಂಡಿನೇಟಿನ ಸಾವು.

೧೯೮೭

ಶಬ್ದದಾಂಪತ್ಯ

೧

ಸಂತೆಗದ್ದಲದಿಂದ
ಎರಡು ಅಸಂಗತ ಶಬ್ದವಾರಿಸಿ ತಂದೆ.
ಒಂದಕ್ಕೊಂದನ್ನು ಜೋಡಿಸಿದೆ, ಕೂಡಿಸಿದೆ.
ಸುಡುಸುಡು ಶಬ್ದವೆರಡೂ ಸೇರಿ, ಆರಿ
ಗಂಡು ಹೆಣ್ಣಿನ ಮೋಡಿಯಲ್ಲಾಡಿ
ನಿರ್ಜನ ಮರುಭೂಮಿಯಲ್ಲೆಲ್ಲ
ಮಲ್ಲಿಗೆಗಂಧ ಕಿಲಕಿಲಸಿತ್ತು.
        ಬೆಂಕಿ ಹೂವಾಗಿ ಅರಳಿತ್ತು
        ಕವಿ ಮಾಂತ್ರಿಕನಾಗಿದ್ದ.

೨

ಆಡಾಡುತ್ತಾ ಹೋದಂತೆ
ಶಬ್ದವೆರಡರಲಿ ಒಂದೆಲ್ಲೋ ಕಳೆದುಹೋಗಿತ್ತು.
ಉಳಿದೊಂದು ಏಕಾಕಿ ಪ್ರೇತವನ್ನೇ ಹಿಡಿದು
ಎದೆ ಬಗೆದು, ಎರಡಾಗಿ ಒಡೆದೆ.
ಫಕ್ಕನೆ ಮಿಂಚೆದ್ದು
ಆ ಸಿಡಿಲ ಸ್ಫೋಟದ ದೆವ್ವದರಚಿಗೆ
ಲೋಕ ತತ್ತರಿಸಿ ನಡುಗಿತ್ತು.
        ಹೂ ಬೆಂಕಿಯಾಗಿ ಕುಣಿದಿತ್ತು
        ಮಾಂತ್ರಿಕ- ಕವಿ ಈಗ ಹುಚ್ಚನಾಗಿದ್ದ.

೧೯೮೮

‘ಅರೆ, ಇಲ್ಲಿ ನೋಡಿದ್ರ ಪೇಪರ್ನಲ್ಲಿ ?’

ಸನ್ನಿವೇಶ : ಬೆಂಗಳೂರಿನ ಕಾಫಿ ಹೌಸ್ ಒಂದರಲ್ಲಿ ಕೇಳಿಬರಬಹುದಾದ ತೀವ್ರ ಸಾಮಾಜಿಕ ಕಳಕಳಿಯ ಒಂದು ನಮೂನೆ. ಪಾತ್ರಗಳು : ಕೈಯಲ್ಲಿ ಪತ್ರಿಕೆ ಹಿಡಿದು, ಸರ್ವರ್‌ಗೆ ಕಾಯುತ್ತ ಕುಳಿತ ಇಬ್ಬರು ಬುದ್ಧಿಜೀವಿಗಳು.

‘‘ಅರೆ, ಇಲ್ಲಿ ನೋಡಿದ್ರಾ ಪೇಪರ್ನಲ್ಲಿ ?’’
　　　‘‘ಅದೇನು ವಿಶೇಷ, ಓದ್ರಿ.’’

‘‘ಭಾಗಲಪುರದ ಜೈಲಿನಲ್ಲಿ
ಖೈದಿಗಳ ಕಣ್ಣುಕುಕ್ಕಿದಾರಂತೆ !’’
　　　‘‘ಕಡೇಪುಟದಲ್ಲಿ ಕಣ್ಣು ಕುಕ್ತಿರೋ
　　　ಆ ಫೋಟೋ ಅದು ಯಾವೊಳದ್ರಿ ?’’

‘‘ಮೈನ್‌ಪುರೀಲಿ ಹರಿಜನರನ್ನ
ಜೀವ ಸಹಿತ ಸುಟ್ಟರಂತೆ!’’
　　　‘‘ಮಂಡ್ಯ ಜಿಲ್ಲಾ ದಲಿತ ಸಮ್ಮೇಳನಕ್ಕೆ
　　　ಅಧ್ಯಕ್ಷರು ಯಾರು ಗೊತ್ತಾಯ್ತ ?’’

‘‘ಗುಲ್ಬರ್ಗದಲ್ಲಿ ಎಲ್ಲೆಲ್ಲೂ
ಮಳೆ ಇಲ್ಲದೇ ಬರ ಅಂತೆ !’’
　　　‘‘ಮುಂದಿನ ಡಿ. ಎ ಯಾವಾಗಂತೆ,
　　　ಸುದ್ದಿ ಇದೆಯಾ ನೋಡಿ.’’

‘‘ಜಿನಿಂಗ್ ಮಿಲ್‌ನ ಕಾರ್ಮಿಕರಿಗೆ
ಎಂಟು ತಿಂಗಳಿಂದ ಸಂಬಳವಿಲ್ಲ!’’
          ‘‘ಎಲಿಜಬೆತ್ ಟೇಲರ್‌ದು
          ಎಂಟನೆ ಮದುವೆ ಯಾವಾಗಂತೊ?’’

‘‘ಗುಂಡೂರಾಯ ಬಚಾವಾದ
ಅವನ ಅದೃಷ್ಟವೇ ಅದೃಷ್ಟ!’’
          ‘‘ಈವೊತ್ತಿನ ಅದೃಷ್ಟ ಸಂಖ್ಯೆ
          ಎಷ್ಟೂ ಅಂತ ಕೊಟ್ಟಿದಾನೆ’’

‘‘ಇದೇನಿದು, ಬಡ್ಜೆಟಿಗೆ ಮೊದಲೇ
ಕರ ಏರಿಸಿದಾರಂತಲ್ಲ!’’
          ‘‘ಕಳ್ಳ ನನ್ಮಕ್ಕಳು, ಇನ್ನು ಮೇಲೆ
          ಬೀರ್ ಬೆಲೆ ಎಷ್ಟಾಗುತ್ತೊ?’’

‘‘ಅಯ್ಯೋ, ಗೂಂದಲೂರಿನ ಗೋಲಿಬಾರ್‌ನಲ್ಲಿ
ಗುಂಡಿಗೆ ಜನ ಬಲಿಯಾದರಂತೆ!’’
          ‘‘ ‘ಗುಂಡು’ ಅಂದರೆ ಜ್ಞಾಪಕಕ್ಕೆ ಬಂತು,
          ನಿನ್ನೆ ‘ವೆಸ್ಟೆಂಡ್’ ಅಲ್ಲಿ ಎಂಥ ಪಾರ್ಟಿ ಅಂತೀರಾ.’’

‘‘ಇವೊತ್ತು ಸಂಜೆ ಸ್ಟೇಡಿಯಂನಲ್ಲಿ
ವಿರೋಧ ಸಭೆ ಇದೆಯಂತಲ್ಲ!’’
          ‘‘ಹೌದೌದು, ಹೋಗ್ಬೇಕು. ಶಾಂತಿ ಟಾಕೀಸಲ್ಲಿ
          ಫಿಲ್ಮ್ ಯಾವದು, ಸ್ವಲ್ಪ ನೋಡಿ.’’

‘‘ಸಂಪಾದಕೀಯ- ‘ಹೊಟ್ಟೆಗೆ ಹಿಟ್ಟಿಲ್ಲ,
ಜುಟ್ಟಿಗೆ ಮಲ್ಲಿಗೆ ಹೂವು’ ’’

"ಹೊಟ್ಟೆ ಹಸಿವು. ಇಷ್ಟು ಹೊತ್ತಾದರೂ
ಸರ್ವರ್ ಯಾರೂ ಬರಲಿಲ್ಲವೇ."

"ಯಾರ್ರೀ ಇಲ್ಲಿ, ಈ ಟೇಬಲ್ಲಿಗೆ?"
"ಬಿಸಿ ಬಿಸಿ ಏನಿದೇರ್ರಿ?"

೧೯೮೧

ಲೆಕ್ಕದ ಮಂದಿ

ಅವನ ಹೊಸ ಕವಿತಾಸಂಗ್ರಹವನ್ನು
ತಿರುವಿ ಹಾಕುತ್ತ ಕುಳಿತ ತಂಗಿ ಕೇಳಿದಳು –
''ನೀನು ಒಟ್ಟೆಷ್ಟು ಕವಿತೆ ಬರೆದಿದ್ದೀಯಣ್ಣ ?''

ಆ ಪ್ರಶ್ನೆ
ಒಬ್ಬಳಿನ್ನೊಬ್ಬಳನ್ನು 'ಎಷ್ಟು ಮಕ್ಕಳು ?'
ಎಂದು ಕೇಳಿದ ಧಾಟಿಯಲ್ಲಿತ್ತು.

ಕವಿ
ಒಂದು ಕ್ಷಣ ಯೋಚಿಸಿದ.

''ಏನು, ಅಷ್ಟೊಂದು ಲೆಕ್ಕ ?''
ತಂಗಿ ನಗಾಡಿದಳು.

ಕವಿ ಹೇಳಿದ –
''ಹೌದು, ಸದಾ ಮಡಿಲಲ್ಲಿ ಕೂಸೊಂದು
ಆಡುತ್ತಿರಬೇಕೆಂಬ ಬಯಕೆ
ಹೆಂಗಸಿಗೆ ಸರಿಯೆ ಸರಿ !
ಆದರೂ ಎಷ್ಟು ಮಕ್ಕಳು ಹಡೆದರಷ್ಟೇ
ಅವಳು ತಾಯಿಯಾದಾಳೆಂದು
ಲೆಕ್ಕ ಹಾಕುತ್ತಿದ್ದೇನೆ!''

೧೯೮೮

ತನಿಖೆ - ತೀರ್ಪು

ಅವನ ಕೊಲೆಯಾಗಿ, ಹೊಲೆ ಕಳೆದು
ಹೊಲಸ ಸುಟ್ಟ ದಿನ
ನಾನಲ್ಲಿ ಸ್ಮಶಾನದಲ್ಲಿದ್ದೆ.
ಸುತ್ತ ಗಿಜಿ ಗಿಜಿ ಗುಂಪು,
ಚಂಡೆಹೂ ಹಾರಗಳ ಹಳದಿ ಹಳಸಲ ಕಂಪು.

ಗುಂಪಿನಲ್ಲೊಬ್ಬ ಇನ್ನೊಬ್ಬನ್ನ ಕೇಳಿದ್ದ –
''ಅರೆ, ನೀವಿಲ್ಲಿ! ಏನು ನಂಟೆ?''
''ಛೆ, ಉಂಟೆ? ಕುತೂಹಲಕ್ಕಾಗಿ ಬಂದದ್ದು, ಅಷ್ಟೆ.''
''ಚಾಂಡಾಲ! ಸುಟ್ಟು ಒಳ್ಳೆಯದ ಮಾಡಿದರು.
ಹೂತಿದ್ದರವನು ಬೇರೂರಿ, ಚಿಗುರಿ
ಲೋಕದ ದಾರಿಮುಳ್ಳಾಗುತ್ತಿದ್ದ.''

ಇದನ್ನ ಕೇಳಿಸಿಕೊಂಡ ಮೂರನೆಯವನೊಬ್ಬ
ಮುಂದೆ ಬಂದು ಇಬ್ಬರನ್ನೂ ಎಳೆದು ಕರೆದೊಯ್ದ.

ಮಾರನೆಯ ದಿನದ ಮುಖಪುಟದಲ್ಲಿ ಬರೆದಿತ್ತು –
''ದೇಶಭಕ್ತನ ಅಂತ್ಯ ಸಂಸ್ಕಾರದಲ್ಲಿ ಸೇರಿದ್ದವರು ಲಕ್ಷ ಜನ.
ಇಬ್ಬರು ಕೊಲೆಗಡಕರನ್ನು ಪೋಲೀಸರು ಬಂಧಿಸಿದ್ದಾರೆ.''

೧೯೭೪

ಹುಟ್ಟೂರ ಮನೆ....ಮರ

ಹತ್ತಾರು ವರ್ಷ ಬಿಟ್ಟು,
ಬಿಟ್ಟುಹೋಗಿದ್ದ ಹುಟ್ಟೂರಿಗೆ
ಮರಳಿ ಬರಬೇಕಾಗಿ ಬಂದಾಗ
ಅಲ್ಲಿ ಫಟ್ಟನೆ ಕಣ್ಣಿಗೆ ಬಡಿದದ್ದು –
ಅಪ್ಪ ಕಟ್ಟಿದ ಮನೆಯ
ಜೀರ್ಣಾವಶೇಷ.

ವರ್ಷ, ಎರಡು ವರ್ಷಕ್ಕೊಮ್ಮೆ ತಪ್ಪದೆ
ಸುಣ್ಣ ಬಣ್ಣ ಕಂಡೂ
(ತಮ್ಮ ಜಂಬ ಕೊಚ್ಚಿಕೊಂಡದ್ದು!)
ನೆಲದಾಳದಿಂದೆದ್ದ ತೇವಕ್ಕೆ
ಗೋಡೆಯ ಗಾರೆಯೆಲ್ಲ
ಚಕ್ಕಳ ಚಕ್ಕಳ ಕಳಚಿಬಿದ್ದಿದೆ.

ಅಲ್ಲಲ್ಲಿ ಇಟ್ಟಿಗೆಗಳು ಪುಡಿಪುಡಿ ಉದುರಿ
ಕಳ್ಳರು ಕನ್ನ ಹೊಡೆದು ಹೋದಂತೆ
ಗೋಡೆಯಲ್ಲಿ ದೊಡ್ಡದೊಡ್ಡ ಕಂಡಿಗಳಾಗಿವೆ.
ತಮ್ಮನ ಹೆಂಡತಿ ಕುಶಲಿ
ಹಂಡೆಪಾತ್ರೆಗಳನ್ನು ಅಡ್ಡವಿಟ್ಟು
ಅದನ್ನು ಮುಚ್ಚಿದ್ದಾಳೆ.

ಕತ್ತೆತ್ತಿ ನೋಡಿದರೆ
ಹಾಳುಮಂಗಗಳ ಹಾವಳಿಗೆ
ಸೂರಿನ ಹೆಂಚೆಲ್ಲ ಚೂರುಚೂರಾಗಿ,
ಮಳೆನೀರು ಕೆಳಸೋರದಿರಲೆಂದು
ತಮ್ಮನ ಮಕ್ಕಳು ತೊಲೆಜಂತ್ರಿಗಳಿಗೆ
ಪಾಲಿಥೀನ್ ಕಟ್ಟುವ ಸಾಹಸಮಾಡಿದ್ದಾರೆ.

ಹಾಗೆಯೇ ಹಿತ್ತಲಿಗೆ ಕಾಲಿಟ್ಟರೆ
ಅದೇ ನೆಲದಲ್ಲಿ
ಅಪ್ಪನ ಕಾಲಕ್ಕೂ ಇಪ್ಪತ್ತು ವರ್ಷ ಹಿಂದೆ
ಅಜ್ಜ ನೆಟ್ಟುಹೋದ ತೆಂಗಿನ ಮರದಲ್ಲಿ
ನೀರು ಗೊಬ್ಬರ ಕಾಣದೆಯೂ
ಹಚ್ಚಗೆ ಹೊಸಕಾಯಿ ಕಚ್ಚಿದೆ.

೧೯೯೨

ಮರಳುಗಾಡಿನ ದುರಂತ

ಸುತ್ತಣ ನೆಲ
ಮರುಭೂಮಿ.

ಬಿತ್ತಿದ ಬೀಜ
ದಾಯಾದಿ ದ್ವೇಷ.

ಹಾಯಿಸಿದ ನೀರು
ರಕ್ತ, ಪೆಟ್ರೋಲು.

ಹಾಕಿದ ಗೊಬ್ಬರ
ಕುಟಿಲ ರಾಯಭಾರ.

ಕೊಯ್ದ ಫಲ
ತಮ್ಮವೇ ಹೆಣಗಳು.

೧೯೯೦

ಕೈಹಿಡಿದಾಕೆಗೆ ಕವಿತೆಗಳು

೧. ಬೇಡ, ಒಳ ಹೋಗು.

ಬೆಳಗ್ಗೆ ನಾನು ಆಫೀಸಿಗೆ ಹೊರಟಾಗ
ಅಗಳಿ ಹಾಕಿಕೊಳ್ಳುವ ನೆಪದಲ್ಲಿ ಹೊರಬಂದು
ನಾನು ರಸ್ತೆ ತಿರುಗುವವರೆಗೂ ನೋಡುತ್ತಲೇ ನಿಂತಿರುತ್ತಿ.
ಆಗ ನಿನ್ನ ಕಣ್ಣಂಚಿನಲ್ಲಿ ಮಾತಿಗೆಟುಕದ
ಯಾವದೋ ಆತಂಕ ಇಣುಕುತ್ತಿರುತ್ತದೆ.
ಹೀಗೆ ಎಷ್ಟು ಹೊತ್ತು ನಿಂತಿರುತ್ತೀಯೋ ನಾನೇನು ಬಲ್ಲೆ.

ಮತ್ತೆ ಸಂಜೆ ನಾನು ಆಫೀಸಿನಿಂದ ಹಿಂಬರುವಾಗ
ಎಷ್ಟೇ ಹೊತ್ತಾಗಿರಲಿ, ಎಷ್ಟೇ ಕತ್ತಲಾಗಿರಲಿ
ನೀರೆರೆವ ನೆಪದಲ್ಲಿ ಗಿಡಗಳ ನಡುವೆ ಗಿಡವಾಗಿ
ತೋಟದ ಗೇಟಿನ ಬಳಿ ಕಾಯುತ್ತ ನಿಂತಿರುತ್ತಿ.
ನನ್ನನ್ನು ಕಂಡು ನಿನ್ನ ಕಣ್ಣಲ್ಲಿ ಮಾತಿಗೆಟುಕದ
ಏನೋ ನೆಮ್ಮದಿ ಮಿಂಚತೊಡಗುತ್ತದೆ.

ದಿನನಿತ್ಯದ ಈ ಬೆಳಗಿನ ಬೀಳ್ಕೊಡಿಗೆ, ಸಂಜೆಯ ಸ್ವಾಗತ ನನಗೂ ಪ್ರಿಯವೇ.
ಆದರೆ ಹಗಲೂ ಸಂಜೆ ಹೀಗೆ ಬಾಗಿಲ ಬಳಿ ನಿಲ್ಲುವುದು ಸರಿಯಲ್ಲ.
ಬೇಸಿಗೆಯ ಬಿಸಿಲು, ಮಾಗಿಯ ಗಾಳಿ,
ಹಾದಿಯ ಧೂಳು, ಬೀದಿಯ ಕಣ್ಣು ಒಳ್ಳೆಯದಲ್ಲ.
ಮುಂದೊಮ್ಮೆ ನಾನು ಹೊರಹೋಗಲಾಗದ ಒಂದು ದಿನ ಬರಬಹುದು.
ಇಲ್ಲವೇ ಹೋದವನು ಹಿಂಬರದ ದಿನವೂ ಬರಬಹುದು.

ಆ ದುರ್ದಿನಕ್ಕೆ ಈಗನಿಂದಲೇ ಅಭ್ಯಾಸಮಾಡಿಕೊ,
ಒಳಹೋಗು.

೧೯೯೦

೨. ಜೀವನ ಜ್ಯಾಮಿತಿ

ನಾನೊಂದು ಚುಕ್ಕಿ, ನೀನೊಂದು ಚುಕ್ಕಿ
ಎರಡೂ ಎರಡು ಗಗನದವು.
ಹೇಗೋ ಏನೋ
ಇಬ್ಬರೂ ಕೂಡಿದ್ದು ಸಮರೇಖೆ, ನೇರ.
ಎಳೆದಷ್ಟೂ ಬೆಳೆಯುತ್ತ ಹೋಗುತ್ತದೆ
ದೂರ, ಬಹು ದೂರ.

ನಡುವೆ ನನಗೆ ಅವಳೋ
ನಿನಗೆ ಯಾವನೋ ಗಂಟುಬಿದ್ದರೆ ಮುಗಿಯಿತು.
ಆಗ ಸಮರೇಖೆಯೊಂದು ತ್ರಿಕೋಣ.
ತ್ರಿಕೋಣಗಳು ವಿಷಮ.
ಅವು ನಿಂತ ನೀರಿನ ಹೊಂಡಗಳಂತೆ.
ಬೆಳೆಯುವುದಿಲ್ಲ, ಕೊಳೆಯುತ್ತವೆ.

೧೯೬೦

೩. ಬಾ, ಕೈ ತಾ.

ನಾವು ಕೈ ಕೈ ಹಿಡಿದು ಹೊರಟಿದ್ದೇವೆ.
ಯಾರ ಕೈ
ಯಾರ ಕೈಯನ್ನು ಹಿಡಿದಿದೆಯೆಂದು ಹೇಳಲಾರದಷ್ಟು
ಕೈಗಳೆರಡೂ ಒಟ್ಟಾಗಿವೆ, ಒಂದಾಗಿವೆ.

ಒಂದನ್ನೊಂದು ಹಿಡಿದ ಕೈಗಳ ಮುದ್ರೆ
ಅದೆಷ್ಟು ಸಹಜ, ಅದೆಷ್ಟು ಸುಂದರ.
ಹಾಗೆ ಹಿಡಿಯಲೆಂದೇ
ಕೈಗಳ ಮಾಟವಾದಂತಿದೆ.

ಬೆರಳುಗಳ ನಡುವಿನ ತೆರವುಗಳು,
ಅಂಗೈಗೆ ಒದಗುವ ಅಂಗೈ,
ಅದಕ್ಕೆ ಹೊಂದಿದ ಸ್ನಾಯುಕ್ರಿಯೆ,
ಆ ಬಿಗಿತ, ಆ ಸಡಿಲು.

ಇದೊಂದು ಜಂಟಿಕ್ರಿಯೆ.
ಬೀಳುವಂತಾದಾಗ ಕೈ ಕೈಯನ್ನು ತಡಕುತ್ತದೆ,
ಹಿಡಿಯುತ್ತದೆ, ಹಿಡಿದು ಮುನ್ನಡೆಯುತ್ತದೆ.
ಕೈ ಕೈ ಬಿಟ್ಟರೆ ನಾವು ಬೀಳುತ್ತೇವೆ, ಇಬ್ಬರೂ.

ಯಾಕೆಂದರೆ ಬದುಕೊಂದು ಜಾರುಬಂಡೆ.
ಹಾಗೆ ಜಾರಿ ಬಿದ್ದು, ನೊಂದು ನರಳುತ್ತಿರುವವರ,

ಇನ್ನು ನರಳಲಾರದೆ ಅಳಿದು ಹೋದವರ ಅವಶೇಷಗಳು
ಸುತ್ತ ಎಚ್ಚರಿಸುತ್ತಿವೆ.

ಇಲ್ಲಿ ಬದುಕಿ ಉಳಿಯಲು
ಒಂದೇ ದಾರಿ : ಕೈ ಕೈ ಹಿಡಿದು ನಡೆಯುವುದು.
ಹಾಗೆ ಕೈ ಕೈ ಹಿಡಿಯುವುದು ಅದೆಷ್ಟು ಸುಲಭ, ಅಷ್ಟೇ ಅದೆಷ್ಟು ಕಷ್ಟ!
ಬಾ, ಕೈ ತಾ.

೧೯೬೦

೪. ಮೂರು ಮತ್ತೊಂದು

ಅದೊಂದು ದಿನವಿತ್ತು.
ಮುತ್ತಿನೊಂದಿಗೆ ಮಲಗಿ
ಮುತ್ತಿನೊಂದಿಗೆ ಎದ್ದು
ಮುತ್ತು ಮೈಯೆಲ್ಲ ಮುತ್ತಿ
ಮತ್ತು ಮಾಡುತ್ತಿದ್ದ
ಮೂರು ದಿನಗಳ ಕ್ಷಣವಸಂತವದು.
ಎಲ್ಲಿ ಹೋಯಿತೊ ಏನೊ
ನೆನಪಷ್ಟನೇ ಹಿಂದೆ ಬಿಟ್ಟು.

ಈಗ ನಡೆದಿದೆ ದೀರ್ಘ ಶಿಶಿರ.
ಕೂಡಿ ಕಳೆದಾದ ಮೇಲೆ
ಬದುಕಿನ ಖಾತೆಕೊನೆಗುಳಿದ ಸಿಲುಕು
ವರ್ಷಕ್ಕೆ ಮೂರೇ ಮುತ್ತುಗಳು.
ವರ್ಷವಿಡಿ ಕಾದು
ಹೇಗೋ ನೆಪದ ಮರೆಯಲ್ಲಿ
ಕೊಟ್ಟು
ಪಡೆಯುವುದು –

ಒಂದು,
ನಿನ್ನ ಹುಟ್ಟುಹಬ್ಬದ ದಿನ ನಾನು.
ಎರಡು,
ನನ್ನ ಹುಟ್ಟುಹಬ್ಬದ ದಿನ ನೀನು.

ಮೂರು,
ನಮ್ಮ ಮದುವೆಯ ಹೆಚ್ಚಿನ ದಿನ
ಇಬ್ಬರೂ ಒಟ್ಟಿಗೆ,
ಒಮ್ಮೆಲೇ.

ಇಲ್ಲ, ಇನ್ನೂ ಒಂದುಂಟು
ಕೊಟ್ಟ ಕೊನೆಯದು.
ಬೇಡ, ಬಿಡಿಸಿ ಹೇಳುವುದಿಲ್ಲ.
(ನಾ ಬಲ್ಲೆ, ಅಶುಭದ ಮಾತ ನೀನೊಲ್ಲೆ.)
ಆ ಕೊನೆ ಮುತ್ತ
ಯಾರು ಯಾರಿಗೆ ಕೊಟ್ಟು
ಲೆಕ್ಕ ಮುಗಿಸುತ್ತೇವೊ
ನೋಡಬೇಕು.

೧೯೬೦

೫. ಪ್ರೇಮ ಕಲಿಸಿದ ಪಾಠ

ಕೈ ಕೈ
ಮೈ ಮೈ
ಮೈ ಮೇಲೆ ಕೈ
ಕೈ ತುಂಬ ಮೈ

ಇಮ್ಮೈ ಒಮ್ಮೈ
ಕತ್ತಲ ಕೋಣೆಯಲ್ಲಿ
ಬೆತ್ತಲ ಬದುಕು
— ದಿಟ್ಟ ರಾತ್ರಿ

ಬೆಳಗಾಗ ಕಣ್ಣು ಬಿಟ್ಟಾಕ್ಷಣ
ನೀನು ಸೀರೆ, ನಾನು ಪಂಚೆ
ಎಳೆದುಕೊಳ್ಳುವ
— ಹೇಡಿ ಹಗಲು.

೧೯೯೦

ಒಳಮನದ ಚಿಂತನೆಗಳು

೧. ಪಂಚಾಮೃತವನ್ನರಸಿ

ಪಂಚೇಂದ್ರಿಯಗಳ
ಪಂಚಾಂಗುಲಿಗಳಿಂದ
ಪ್ರಪಂಚವನ್ನೇ ಪಡೆಯ ಹೊರಟ
ಎಲೆ ಮಹತ್ವಾಕಾಂಕ್ಷಿಯೆ,
ಹೇಳು –
ಮಣ್ಣಿನ ಸ್ವರವೇನು ?
ನೀರಿನ ಬಣ್ಣವೇನು ?
ಆಕಾಶದ ಗಂಧವೇನು ?
ಗಾಳಿಗೆ ರುಚಿಯುಂಟೆ ?
ಬೆಂಕಿ ಮೃದುವೆ, ಗಟ್ಟಿಯೆ ?

ಇವೆಲ್ಲ ಬೆರೆತು ಒಂದಾದ
ಆ ಪಂಚಾಮೃತ-ತತ್ವ ಅದಾವುದು ?
ಅದರ ಹೆಸರೇನು ?
ಅಂತಹದಿದ್ದರೂ ಅದನ್ನು ಒಟ್ಟಾಗಿ ಗ್ರಹಿಸುವ
ಇಂದ್ರಿಯ ಶಕ್ತಿ ನಿನಗಿದೆಯೆ ?
ಕೈಲಿರುವುದಕ್ಕೆ ಖುಷಿ ಪಡದೆ
ಇಲ್ಲದ್ದನ್ನ ಬಯಸಿ ವ್ಯಥೆಪಡುವುದೇ
ಬದುಕೆ ?

೧೯೭೮

೨. ಅಂತರ

ಅರ್ಧ ಶತಮಾನ ಕಾಲ
ಒಬ್ಬರನ್ನೊಬ್ಬರು ಬಿಟ್ಟಿರಲಾರದಂತೆ
ಒಟ್ಟಿಗೆ ಇರುತ್ತೇವೆ.

ಇಬ್ಬರಲ್ಲಿ ಒಬ್ಬರು ಹೋದಾಗ
ಕ್ಷಣದಲ್ಲಿ 'ಇವಳೊ', 'ಇವರೊ'
'ಅದು'ಗಿ ಬಿಡುತ್ತದೆ.

'ಅದ'ನ್ನು
ಎಷ್ಟು ಬೇಗ ಸಾಗಿಸಿವೇಯೋ
ಎಂಬ ಆತುರ.

ಹಗಲು ಸತ್ತರೆ
ರಾತ್ರಿಯೊಳಗೇ
ಸಂಸ್ಕಾರ ಮಾಡಿ ಮುಗಿಸಬೇಕೆಂಬ ನಿಯಮ.

ಸಂಜೆ ಸತ್ತರೆ
ಅದರೊಡನೆ ರಾತ್ರಿಯೆಲ್ಲಾ
ಹೇಗೆ ಕಳೆಯುವುದೆಂಬ ಭಯ.

ಬದುಕು-ಸಾವುಗಳ ಈ ಅಂತರದ ದೂರ
ಅದೆಷ್ಟು ಕ್ರೂರ! ೧೯೭೮

೩. ಷಷ್ಠ್ಯಬ್ದಪೂರ್ತಿಯಂದು ಚಿಂತನೆ

ಇವತ್ತು ನನ್ನ ವರ್ಷದ ಹೆಚ್ಚು,
ಅದಕ್ಕೂ ಹೆಚ್ಚು, ಷಷ್ಠಿಪೂರ್ತಿ.
ಮನೆಮಂದಿಗೆಲ್ಲ ಏನೋ ಸಂಭ್ರಮ.
ಬೆಳಗಾಗೆದ್ದು ಮನೆಯ ಮುಂದೆ ಗುಡಿಸಿ, ಸಾರಿಸಿ, ಹಸೆಯಿಕ್ಕಿ
ಮುಂಬಾಗಿಲಿಗೆ ಹಸಿರು ತೋರಣ ಕಟ್ಟಿದ್ದಾರೆ.
ಸಾಲದ್ದಕ್ಕೆ ಓಲಗ ಬೇರೆ ಕರಸಿದ್ದಾರೆ.

ಟೆಲಿಫೋನಿನಲ್ಲಿ ಶುಭಾಶಯಗಳ ಮೊರೆತ –
'ಮೆನಿ ಹ್ಯಾಪಿ ರಿಟರ್ನ್ಸ್ ಆಫ್ ದಿ ಡೇ!'
ಬಂಧುಮಿತ್ರರೆಲ್ಲರೂ ಬರುತ್ತಿದ್ದಾರೆ
ಕೈಯಲ್ಲಿ ಹೂಗುಚ್ಛಗಳು, ಮಿಠಾಯಿ ಡಬ್ಬಗಳು
ದೊಡ್ಡವರ ಕೈ-ಕುಲುಕು, ಮಕ್ಕಳ ಕೆನ್ನೆಮುತ್ತು
ಅಡಿಗೆ ಮನೆಯಿಂದ ಒಗ್ಗರಣೆಯ ಘಾಟು, ಪಕ್ವಾನ್ನದ ಘಮ.

ಏನು, ಇದೆಲ್ಲದರ ಅರ್ಥ ?
ರೋಗ ರುಜಿನ, ಕಷ್ಟ ಕಾರ್ಪಣ್ಯಗಳ ಕಲ್ಲುಮುಳ್ಳು ತುಳಿಯುತ್ತ
ಬದುಕಿನ ಗುಡ್ಡದ ಮೇಲೆ ಹೀಗೇ ಇನ್ನೂ ಕೆಲಕಾಲ ಸಾಗೆಂಬ
ಆಶಯವೆ ?
ಅಥವಾ ಅರವತ್ತು ವರ್ಷ ಹಾಗೆ ದಾರಿ ಸಾಗಿಸಿದ ಸಾಹಸಕ್ಕೆ
ಮೆಚ್ಚಿಗೆಯೆ ?

ಹಾಗೇ ಇನ್ನೊಂದು ಯೋಚನೆ –

ವಯಸ್ಸಾದಂತೆ ವಿಸ್ಮೃತಿ ಮುತ್ತಿ
ಬದುಕಿನಲ್ಲಿ ಏನೇನೋ, ಕೊನೆಗೆ ನಮ್ಮ ಹೆಸರು ಸಹ, ಮರೆಯುವಂತೆ
ವಯಸ್ಸಿನ ಅರಿವನ್ನೂ ಮರೆಯಲಾದರೆ
ನಮ್ಮ ಕೊನೆಗಾಲ
ಅದೆಷ್ಟು ಸಹ್ಯ !

೧೯೮೯

ಕಲಾಶ್ನಿಕೋವ್ ಮತ್ತು ಮಕ್ಕಳು

೧

ಯಾವ ಕೇಡಿನ ಗಳಿಗೆಯಲ್ಲಿ
ಅದಾವ ದುಷ್ಟ ಭೂತ ಬಂದು ಇಟ್ಟು ಹೋಯಿತೊ ಏನೊ,
ನಿನ್ನ ಕೈಯಲ್ಲಿದೆ
ಒಂದು ಹುಚ್ಚು ಹೊಳಪಿನ ಕಲಾಶ್ನಿಕೋವ್.
ಅದೇ ಸರ್ವಸ್ವವೆಂಬಂತೆ ನಿನ್ನೆಲ್ಲ ಶಕ್ತಿಯನ್ನೂ
ಅದಕ್ಕೆ ನೀನು ಧಾರೆ ಎರೆದಿದ್ದೀಯೆ.
ಅದೇ ನಿನ್ನ ಅಪ್ಪ ಅಮ್ಮನೆಂಬಂತೆ
ಅದರ ಕರಿನೆರಳಿನಡಿ ಬೆಳೆಯುತ್ತಿದ್ದೀಯೆ.
ಮುದ್ದುಮಗುವೆಂಬಂತೆ
ಅದನ್ನು ಹೆಗಲ ಮೇಲೆ ಹೊತ್ತು ಓಡಾಡುತ್ತಿದ್ದೀಯೆ.

೨

ನೀನು ತಿಳಿದಿರುವಂತೆ ಅದಕ್ಕೆ ದಿಕ್ಕು ಒಂದಲ್ಲ, ನಾಲ್ಕು.
ಮೊದಲಿಗೆ – ನಿನ್ನ ಎದುರು.
ಅಲ್ಲಿ ನಿಂತಿದ್ದಾನೆ, ನಿನ್ನ ಕಲ್ಪನೆಯ ಎದುರಾಳಿ, ಶತ್ರು.
ಈ ಜಗತ್ತಿನಲ್ಲಿ ಯಾರೂ ಒಂಟಿಯಲ್ಲ.
ಅವನ ಸುತ್ತ ಆಡುತ್ತಿವೆ ಅವನ ಮಕ್ಕಳು,
ಅವುಗಳ ಎಳೆಗೆಳೆಯರು.

ಡಿಸೆಂಬರ್ ೧೯೬೦ರಲ್ಲಿ ತುರ್ಕಿಯ ಇಸ್ತಾನ್‌ಬುಲ್ ನಗರದಲ್ಲಿ ನಡೆದ ಆಫ್ರೋ-ಏಶಿಯನ್ ರೈಟರ್ಸ್ ಅಸೋಸಿಯೇಶನ್‌ನ ಸಮ್ಮೇಳನದ ಕವಿಗೋಷ್ಠಿಯಲ್ಲಿ ಓದಿದ ಇಂಗ್ಲಿಷ್ ಕವಿತೆಯ ಕನ್ನಡ ರೂಪ.

ನಗೆಯೊಂದನ್ನು ಬಿಟ್ಟು
ಬೇರ ಏನನ್ನೂ ಅರಿಯದ ಹಸುಗೂಸುಗಳು ಅವು.
ಬಂದೂಕಿನ ನಳಿಗೆಗೆ ಸಿಕ್ಕಿಬಿದ್ದ ನಿನ್ನ ಕುರುಡುಕಣ್ಣಿಗೆ
ಅವು ಕಾಣುವುದಾದರೂ ಹೇಗೆ ?

೩

ಅವೂ ನಿನ್ನ ಮಕ್ಕಳಂತೆಯೇ ಮುದ್ದು ಪಾಪಗಳು.
ಅವುಗಳ ರಕ್ತ ನಿನ್ನ ಮಕ್ಕಳದರಂತೆಯೇ ಕೆಂಪು, ಜೀವಗೆಂಪು.
ಅವರ ಎಳೆಬಾಳಲ್ಲಿ ತುಂಬಿದೆ ಮೊಲೆಹಾಲಿನ ವಿಚಿತ್ರ ಕಂಪು.
ಅವರ ಲಲ್ಲೆಮಾತಿನಲ್ಲಿದೆ ಸಂಗೀತಕ್ಕಿಲ್ಲದ ಇಂಪು.
ಅವರ ಬಾಳಿಗಿದೆ ನಿನಗಿಲ್ಲದ ಒಂದು ಭವಿಷ್ಯ.
ಎದುರಾಳಿಯನ್ನು ಕೊಂದಾಗ ಅವೂ ಸಾಯುತ್ತವೆ.
ಆ ದೃಶ್ಯ – ಗಾಯಗೊಂಡು ಸತ್ತ ಮಕ್ಕಳ ಗುಡ್ಡೆ ಗುಡ್ಡೆ ಹೆಣ –
ಮಹಾದಾರುಣ.
ತಾಳು, ದುಡುಕಬೇಡ,
ದಿಕ್ಕು ಬದಲಾಯಿಸು.

೪

ಇನ್ನು ಎದುರಿನ ದಿಕ್ಕೆಂದರೆ ನಿನ್ನ ಕಡೆ, ನಿನ್ನೆದೆಯೇ.
ಬಂದೂಕಿನ ಕುದುರೆಯೆಳೆದೆಯೋ
ಒಂದು ಕ್ಷಣದಲ್ಲಿ ನೀನು ರಕ್ತಮೆತ್ತಿದ ಮಾಂಸದ ಮುದ್ದೆ
ನಿನ್ನೆಲ್ಲ ಬದುಕೂ ಹರಕುಬರಕು.
ಬೇಡ, ಅದು ಆತ್ಮಹತ್ಯೆ, ಹೇಡಿತನ.
ನಿನ್ನ ತಪ್ಪಿಗೆ ಅದು ಪ್ರಾಯಶ್ಚಿತ್ತವೂ ಅಲ್ಲ, ಕ್ಷಮೆಯೂ ಅಲ್ಲ.
ಬದುಕಿನಲ್ಲಿ ಅದಕ್ಕಿಂತ ಒಳ್ಳೆಯ ಸಾಧ್ಯತೆಗಳಿವೆ.
ಬಾಳ ಬಯಸುವವನಿಗೆ ಬದುಕೇ ಸ್ವರ್ಗ.
ತಾಳು, ದುಡುಕಬೇಡ,
ದಿಕ್ಕು ಬದಲಾಯಿಸು.

೫

ಮತ್ತೆ ಮೂರನೆ ದಿಕ್ಕು – ಮೇಲೆ.
ವಿಶಾಲ ಆಕಾಶ, ನೀಲಿ, ಗೂಢ ನೀಲಿ.
ಇಲ್ಲದೆಯೂ ಇದ್ದಂತೆ ನಂಬಿಸುವ
ಮಾಯೆ ಅದರ ಗುಣ.
ಹುಚ್ಚ, ನೀನೆಷ್ಟೇ ಗುರಿಯಿಡು
ಗುಂಡು ಮುಟ್ಟದು ಅದಕೆ.
ಬದಲು, ನಿನ್ನ ತಲೆಯ ಮೇಲೆಯೇ ತಿರುಗಿಬಿದ್ದು
ನಿನ್ನನ್ನು ಸುಟ್ಟು ಹಾಕೀತು ನಿನ್ನ ಸುಡುಗುಂಡು.
ತಾಳು, ದುಡುಕ ಬೇಡ,
ದಿಕ್ಕು ಬದಲಾಯಿಸು.

೬

ಇನ್ನು ನಾಲ್ಕನೆಯ ಕೊನೆ ದಿಕ್ಕು – ಕೆಳಗಿನ ಭೂಮಿ.
ಯುಗಯುಗಗಳ ಅವಮಾನವನ್ನರಗಿಸಿಕೊಂಡು
ಏನೂ ಆಗಿಲ್ಲವೆಂಬಂತೆ ಅದು ಬೀರುತ್ತಿದೆ
ಹಚ್ಚ ಹಸಿರ ನಗೆ.
ಅದರ ಕನ್ನೆ-ಕೆನ್ನೆಯ ಮೇಲಿದೆ
ಹೂಹಣ್ಣುಗಳ ಲಜ್ಜೆಗೆಂಪು.
ಮೂರ್ಖ, ಅದರ ಕಠೋರ ತಾಳ್ಮೆಗೆ
ನಿನ್ನೊಂದು ಗುಂಡೂ ಈಡೆ ?
ಬಂದೂಕನ್ನು ಎಸೆ.
ಸತ್ತ ಹೆಣವೆಂಬಂತೆ ಅದನ್ನು ನೆಲದಾಳದಲ್ಲಿ ಹೂಳು, ಮಣ್ಣು ಮಾಡು.

೭

ಇನ್ನು ಯಾವ ದಿಕ್ಕೂ ನಿನಗುಳಿದಿಲ್ಲ.
ಭ್ರಮೆಯಳಿದ ನೀನೀಗ ಸ್ವತಂತ್ರ.

ನೋಡು, ನಿನ್ನ ಭಾರ ಈಗ ಅದೆಷ್ಟು ಹಗುರ.
ಕೈ ಕೈ ಬೀಸುತ್ತ ಮುನ್ನಡೆ.
ನಿನ್ನ ಕಲ್ಪನೆಯ ಎದುರಾಳಿ ಇನ್ನಿಲ್ಲ.
ಇರುವವೆಂದರೆ ನಿನ್ನ ಹುಚ್ಚಾಟವನ್ನೇ
ಭಯಭೀತರಾಗಿ ನೋಡುತ್ತ ನಿಂತಿದ್ದ
ಮುದ್ದುಗಲ್ಲದ ಮಕ್ಕಳು.
ನಗು, ಈಗ ನಗೆ ಸುಲಭ.
ನಗೆಗೆ ನಗೆ ಕೊಟ್ಟು ಅವೂ ನಗುತ್ತವೆ.

೮

ಅವನ್ನು ತಬ್ಬು, ಮುತ್ತಿಡು.
ಆ ನಾಳಿನ ಬಾಳಲ್ಲಿ
ಸ್ವರ್ಗದ ಹೂ ಅರಳುವುದನ್ನು ನೋಡಿ
ಖುಷಿ ಪಡು.

೧೯೬೦

ಕವಿಯೆಂದು ಕರೆದುಕೊಳ್ಳುವುದು

ನಾನು ಬರೆದದ್ದರಲ್ಲಿ
ಉಳಿದೆಲ್ಲಕ್ಕಿಂತ
ಕವಿತೆಗಳೇ ಹೆಚ್ಚು.

ಆದರೂ ನನ್ನನ್ನು ನಾನು
ಎಂದೂ 'ಕವಿ' ಎಂದು
ಕರೆದುಕೊಳ್ಳುವುದಿಲ್ಲ.

ಇದು ತಪ್ಪಲ್ಲವೆನ್ನುವುದಕ್ಕೆ–
ಮೊನ್ನೆ ನಡುದಾರಿಯಲ್ಲೊಬ್ಬ ಗಂಡಸು
ಉಟ್ಟ ಬಟ್ಟೆ ಕಳಚಿ

'ನಾನು ಗಂಡಸು', 'ನಾನು ಗಂಡಸು'
ಎಂದು ಅರಚುತ್ತಿದ್ದುದನ್ನು ಕಂಡು
ಜನ ನಕ್ಕಿದ್ದನ್ನು ನಾನು ಕಂಡಿದ್ದೇನೆ.

೧೯೯೪

ಪಿತೃಪ್ರಪಿತೃಗಳು

ನಾವು ವರ್ಷಕ್ಕೊಮ್ಮೆ ತಿಥಿ ಮಾಡುವ
ನಾವು ಕಂಡರಿಯದ,
ಗೋಡೆ ಪಟದ
ತಾತ ಮುತ್ತಾತಂದಿರಲ್ಲೊಬ್ಬ

ಅಥವಾ ನಾವು ಸ್ವರ್ಗಕ್ಕೇರಿಸಿದ
ಅವರಿಗೂ ಹಿಂದಿನ
ನಮ್ಮದೇ ಹೆಸರು, ಮುಖ ಹೊತ್ತ
ಒಬ್ಬ ಪುರಾತನ ಪ್ರಪಿತೃ

ನಡುರಾತ್ರಿ
ನಾವು ಮನೆಯಲ್ಲೊಬ್ಬರೇ ಇರುವಾಗ
ಬಂದು ಬಾಗಿಲು ತಟ್ಟಿ
ನಿದ್ರೆಯಿಂದೆಬ್ಬಿಸಿ

'ಯಾಕೊ ಮಗು, ನಾನು ಕಣೊ,
ಗುರುತು ಹತ್ತಲಿಲ್ಲವೆ?'
ಎಂದು ಪರಿಚಯ ಹೇಳಿ
ಅಪ್ಪಿಕೊಳ್ಳಲು ಬಂದರೆ —

ಶಾಂತಂ, ಪಾಪಂ !

೧೯೭೭

ತಘಲಖ್‌ನ ಮರ್ಜಿ

ನಿಲುಗನ್ನಡಿಯ ಮುಂದೆ
ಬೋಳುತಲೆ ಸವರಿಕೊಳ್ಳುತ್ತ ನಿಂತ
ತಘಲಖ್
ತನ್ನ ಮೆಚ್ಚಿನ ಹಜಾಮನಿಗೆ ಹೇಳಿದನಂತೆ –

''ಷಾಭಾಷ್ ಮಗನೆ, ನಿನ್ನ ಕೈಚಳಕಕ್ಕೆ ಮೆಚ್ಚಿದ್ದೇವೆ.
ಇದೊ, ನಮ್ಮ ಮರ್ಜಿ, ನಿನಗಿದು ಬಡ್ತಿ –
ಇವತ್ತಿನಿಂದ ನೀನು ನಮ್ಮ ಆಸ್ಥಾನದ ದರ್ಜಿ.
ಹೋಗು, ಅಡಿಗೆಮನೆಯ ಪಾರುಪತ್ಯ ವಹಿಸಿಕೊ.
ಗೊತ್ತಲ್ಲ, ಬೆಲ್ಲದ ಬಿಸಿ ಬಿಸಿ ಬಿರಿಯಾನಿ ನಮಗಿಷ್ಟ.
ರಾತ್ರಿಯೂಟಕ್ಕೆ ಅದನ್ನೇ ಬೇಯಿಸು.''

ಹಾಗೆ ಹೇಳ ಹೇಳುತ್ತಲೇ
ಇನ್ನೂ ಹಡಪ ಸೇರದ
ಹಜಾಮನ ಕೈಯ ಕ್ಷೌರಗತ್ತಿಯನ್ನು ಕಂಡವನೆ
ಬೆದರಿ ತನ್ನ ಕತ್ತಿ ಸೆಳೆದು ಬೀಸಿದನಂತೆ.

೧೯೭೭

ನನ್ನ ಮೆಚ್ಚಿನ ಹೂವು

೧

ಕೆಲ ಹುಡುಗಿಯರಿರುತ್ತಾರೆ.
ಸೂರ್ಯಕಾಂತಿಯಂತವರು
ತೋಟದ ಮಧ್ಯೆ ತಲೆಯೆತ್ತಿ ನಿಂತು
ಕಣ್ಣ ಸೆಳೆಯುವುದಿಲ್ಲ.
ಮುಖಕ್ಕೆ ಮುಖಕೊಟ್ಟು
ಮುಖವರಳಿಸಿ ಮಾತಾಡುವುದಿಲ್ಲ.

೨

ಬದಲು, ಬದಿಯ ಬದುವಿನಲ್ಲೆಲ್ಲೋ ಹುದುಗಿ
ಕಣ್ಣ ಕೈ ತಾಗಿದರೆ ಸಾಕು,
'ಮುಟ್ಟಿದರೆ ಮುನಿ' ಯಂತೆ
ಮುದುಟಿಕೊಳ್ಳುತ್ತಾರೆ.
ತಮ್ಮಷ್ಟಕ್ಕೆ ತಾವು ಹೇಗೋ
ನೊಯ್ಯನೆ ನೋಯುತ್ತ ಇಲ್ಲವಾಗುತ್ತಾರೆ.

೩

ಇನ್ನು ಕೆಲವರು
ಕುಂಡದಲ್ಲಿಟ್ಟ ಕ್ಯಾಕ್ಟಸ್ ಕಳ್ಳಿಗಳು.
ವಿಲಕ್ಷಣ ರೂಪಾಕಾರ. ಆ ಕಾರಣಕ್ಕೆಂದೇ
ನೋಡಲು ಚೆನ್ನ– ದೂರದಿಂದಷ್ಟೇ.
ಮೈ ಮರೆತು ಕೈ ತಾಗಿದರಾಯ್ತು
ಮುಳ್ಳಿರಿತ, ನವೆ, ಉರಿ ಖಾತ್ರಿ.

ಮೂವತ್ತು ವರ್ಷ ಸಂಸಾರ ಮಾಡಿ, ಈಗಲೂ ಹೆಂಡತಿಯಲ್ಲಿ ತಪ್ಪು ತೆಗೆದು ಎಗರಾಡುವ ಮಿತ್ರನೊಬ್ಬನ ಸಂತೈಕೆಗೆಂದು ಬರೆದದ್ದು.

೪

ಮತ್ತೆ ಕೆಲವರು ವಿದೇಶೀ ಗುಲಾಬಿಗಳು.
ಅವೂ ಕ್ಯಾಕ್ಟಸ್ಸೇ ಅನ್ನಿ! ವ್ಯತ್ಯಾಸವಿಷ್ಟೆ –
ಬಣ್ಣ ಬಣ್ಣದ ನಗೆ-ಹೂ ಚೆಲ್ಲಿ
ಕಂಪು ಬೀರುತ್ತ ನಲಿಯುತ್ತಾರೆ, ನಲಿಸುತ್ತಾರೆ.
ಮೈ ಮರೆತು ಒಲಿದು ಹೋದಿರೊ
ಕೊಂಡಿಮುಳ್ಳಿನ ಇರಿತ ಬಲು ಕ್ರೂರ.

೫

ಇನ್ನೊಂದು ಜಾತಿ ಕೆಂಡಸಂಪಿಗೆಯದು.
ಬಣ್ಣ ಕಣ್ಣೆರಿವ ಹಳದಿಗೆಂಪು.
ಹಾದಿಸುದ್ದಿ, ಬೀದಿಗುಲ್ಲುಗಳಂತೆ ಗಾಳಿಯಲಿ
ಹರಡಿ, ಹಾರಾಡುತ್ತ ಗುದ್ದುವ ಅದರ ದಿಟ್ಟವಾಸನೆ
ತಲೆಭಾರ, ಕೆಲವರಿಗೆ ಅಲೆರ್ಜಿ.
ಆ ಸಂಗ ಹಿತವೆಷ್ಟೋ ಅಷ್ಟೇ ಅಹಿತ ಸಹ.

೬

ಇನ್ನು ಕೊಳದ ಮಧ್ಯದ ಕೆಂದಾವರೆ.
ಕಂಡದ್ದಕ್ಕಿಂತ ಕೇಳಿದ್ದೇ ಹೆಚ್ಚು.
ಕಾವ್ಯ ಪುರಾಣಗಳ ಮೀಸಲು ಪುಷ್ಪ ಅದು,
ದೇವರ ಪಾದಕ್ಕೆಂದೇ ಮಾಡಿದ್ದು.
ಚಂದ ನಿಜ, ಆದರೆ ಕೆಸರ ನೀರಲಿ ಇಳಿದು
ಅದನು ಕೀಳುವ ಗೀಳು ಬರಿಗೋಳು.

೭

ದೈವ ಸೃಷ್ಟಿಯಲಿ ವೈವಿಧ್ಯಕ್ಕುಂಟೆ ಕೊರತೆ ?
ಉದ್ದುದ್ದ ಬೆಳಸಬಹುದೀ ಯಾದಿ
ಇದ್ದದ್ದೆ ತಾನೆ

ವಾದಿಗೊಂದು ಸಂವಾದಿ?
ಆಗ ಕವಿತೆಯ ಗತಿ? ಎಂತಲೇ
ಕೊನೆಯದೊಂದನ್ನು ಹೇಳಿ ಮುಗಿಸುತ್ತೇನೆ.

೮

ಹೊಸದೇನಲ್ಲ. ಮೈಸೂರ ಮಂದಿಗದು ಬಲು ಅಚ್ಚು ಮೆಚ್ಚು.
ಬದುಕಿಗೂ ಬಂದು, ಕವಿತೆಗೂ ಸಂದ
ಮನೆಯಂಗಳದ ಮಲ್ಲೆ, ಮಲ್ಲಿಗೆ, ಜಾಜಿ.
ನೆಟ್ಟಲ್ಲಿ ಹುಟ್ಟುವುದು, ಹುಟ್ಟಿದ್ದೆ ಹಬ್ಬುವುದು.
ಹೂವು ನಕ್ಷತ್ರಾಕಾರ,
ಹಾಲ್ಬಿಳುಪು, ಬೆಣ್ಣೆಮೃದು.

೯

ಗಾಳಿಯಲಿ ತೆಳುವಾಗಿ ತೇಲುತ್ತ
ಹಿರಿದಷ್ಟೂ ಬೀರುತ್ತ ಹೋಗುವ
ಅದರ ಕಂಪಿನ ಇಂಪು ಜೀವಕ್ಕೆ ತಂಪು.
ಆ ಹೂವ ಸಹವಾಸ ತಪರಾಕ್ಕೆ ತಟ್ಟಿದಂತಲ್ಲ,
ತುಟಿಗೆ ಮುತ್ತಿಟ್ಟಂತೆ
ಮೃದು, ಮೇಲೆ ಸವಿ.

೧೦

ಇನ್ನು ನನ್ನಾಯ್ಕೆ ಏನೆಂದೆಯಾ?
ಬಯಕೆ ಎಲ್ಲರ ಹಕ್ಕು,
ಗಳಿಕೆ ಭಾಗ್ಯದ ಮಾತು!
ದಕ್ಕಿದ್ದಕ್ಕೆ ಮನಸಾರೆ ವಂದಿಸಿ
ಅದೆ ಶ್ರೇಷ್ಠ ಎಂದು ನಂಬಿ, ಬದುಕುವುದಿದೆಯಲ್ಲ,
ಅದು ಬುದ್ಧಿವಂತಿಕೆ, ಮಿತ್ರ.

೧೯೭೯

ಇದೊ, ಬಂತು ಚೈತ್ರ

ಕ್ರೋಧಿ ಸಂವತ್ಸರದ (೧೨ ಏಪ್ರಿಲ್ ೧೯೬೪) ಯುಗಾದಿಯಂದು ಕನ್ನಡ ಭಾರತಿಯವರು ದೆಹಲಿಯಲ್ಲಿ ಏರ್ಪಡಿಸಿದ್ದ ಉತ್ಸವ ಸಮಾರಂಭದಲ್ಲಿ ಹಾಡಿ ಆಡಲೆಂದು ವಿಶೇಷವಾಗಿ ರಚಿತವಾದ ಕೋಲಾಟದ ಪದ.

ರಾಗ : ದುರ್ಗಾ; ತಾಳ : ರೂಪಕ (ರಾಗ ಯೋಜನೆ: ಬಿ.ವಿ.ಕಾರಂತ).

ಕೈಮುಗಿದು ಗಣಪತಿಗೆ
ಕಟ್ಟೀರೊ ಗೆಜ್ಜೆ ।
ಕೈಮುಗಿದು ಸರಸತಿಗೆ
ಹಾಕೀರೊ ಹೆಜ್ಜೆ ॥ ೧ ॥

ಕಟ್ಟೀರೊ ಗೆಜ್ಜೆ
ಕಣ ಕಣ ಗೆಜ್ಜೆ ।
ಹಾಕೀರೊ ಹೆಜ್ಜೆ
ಹೂವಿನ ಹೆಜ್ಜೆ ॥ ಮೇಳ ॥

ಕಳೆದೀದೆ ಹಳೆ ವರುಷ
ಇದೊ ಬಂತು ಚೈತ್ರ ।
ಕಣ್ಣಿಟ್ಟ ಕಡೆಯೆಲ್ಲ
ಚಿತ್ರಽ ವಿಚಿತ್ರ ॥ ೨ ॥

ದಿನವೂ ಇದ್ದದ್ದೆ
ಹೊತ್ತಾರೆ ಬೆಳಕು ।

ಆದಂರೂ ಇಂದ್ಯೆತೆ
ಅದಕೇನೊ ಥಳಕು ॥ ೩ ॥ ಮೇಳ ॥

ಮಾಗೀಯ ಚಳಿ ಕಳೆದು
ಕೊರಗೆಲ್ಲ ಉಡುಗಿ ।
ಆಗಾಳೆ ನೆಲದವ್ವ
ಹರೆಯಂದ ಹುಡುಗಿ ॥ ೪ ॥

ಹಸಿರುಟ್ಟು ಹೂ ಮುಡಿದು
ಪೂಸಿಂ ಸುಗಂಧ ।
ಹಸೆಗೆದ್ದ ಹೆಣ್ಣಂತೆ
ಅವಳಂದ ಚಂದ ॥ ೫ ॥

ಈ ಚೆಲುವೆನೋಲ್ಯೆಸಿ
ಕೈ ಹಿಡಿಯ ಬಂದ ।
ಮದುವಣಿಗ ಮಾರಣ್ಣ
ತೇರಿಳಿದು ನಿಂದ ॥ ೬ ॥ ಮೇಳ ॥

ಮಾವಿಂನ ಬೇವಿಂನ
ಮರಗಂಳು ಚಿಗುರಿ ।
ಕಟ್ಟೀವೆ ಕೆಂದಳಿರ
ತೋರಂಣ ಭಾರಿ ॥ ೭ ॥

ಅರಳೀವೆ ಅಂಗಳದಿ
ಬಗೆ ಬಗೆಯ ಮೊಗ್ಗು ।
ಮಲ್ಲಿಂಗೆ ಸಂಪಿಂಗೆ
ಜಾಜಿಂಯ ಹಿಗ್ಗು ॥ ೮ ॥ ಮೇಳ ॥

ಹಾಡೀವೆ ಹಕ್ಕಿಗಳು
ಸುವ್ವಿ ಸೋಬಾನೆ ।
ನೆಲಕಿಳಿದು ಬಂದಂತೆ
ಬಾನಿಗೆ ಬಾನೆ ॥ ೯ ॥

ಇಕ್ಕೀವೆ ಇರುಳಲ್ಲಿ
ಚಿಕ್ಕೆಗಳು ಸೇಸೆ ।
ಮಡಿಲಿನ ಬೆಳ್ಳಿ ಹುಡಿ
ನಾಲ್ದೆಸೆಗು ಸೂಸೆ ॥ ೧೦ ॥ ಮೇಳ ॥

ದೇವರದು ಈ ಹೊತ್ತು
ಓ ಎಂಥ ಮೋಡಿ ।
ಎದೆ ತೆರೆದು ಹಾಡೋಣ
ಕುಣಿಯೋಣ ಕೂಡಿ ॥ ೧೧ ॥

ಬದುಕೆಲ್ಲ ಸಿಹಿಯಲ್ಲ
ಇದೆ ಕಾವು ನೋವು !
ಅದಕೆಂದೆ ಬೆರಸಣ್ಣ
ಬೆಲ್ಲದಲಿ ಬೇವು ॥ ೧೨ ॥ ಮೇಳ ॥

ದುಡಿಬೇಕು. ದುಡಿಯಾದೆ
ಉಳಿದೀತೆ ಜೀವ ।
ದುಡಿತದ ನಡುನಡುವೆ
ಬಿಡುವಿರಲೊ, ದೇವ ॥ ೧೩ ॥

ಬಿಡುವಿಂದು, ಕೂಡೇವಿ
ಕುಣಿಲೆಂದು ನಾವು ।

ಕುಣಿತsದ ಕಣವೀದು
ಸ್ವರ್ಗsದ ತಾವು ॥ ೧೪॥

ಕಟ್ಟೀರೊ ಗೆಜ್ಜೆ
ಕಣಕಣ ಗೆಜ್ಜೆ ।
ಹಾಕೀರೊ ಹೆಜ್ಜೆ
ಹೂವಿsನ ಹೆಜ್ಜೆ ॥ ೧೫॥

ಇದೊ ಬಂತು ಚೈತ್ರ ।
ಚಿತ್ರs ವಿಚಿತ್ರ ॥ ಮೇಳ॥

೧೯೬೪

ಯುಗಾದಿಯಲ್ಲಿ ಬೇವು

ರಾಯಚೂರಿನ ದಿವಂಗತ ಎಸ್. ಜಿ. ಸ್ವಾಮಿಯ ನೆನಪಿಗೆ

೧

ಏನು, ಬೇವೆ? ಬಿಡಿ, ಅದೊಂದು ದುಷ್ಟ ದೈವದ ಸೃಷ್ಟಿ
ಎಂದು ಮೂಗು ಮುರಿವವರುಂಟು.
ಹಾಳು ಕಾಗೆಗಳು ಉಚ್ಚಿದ ಬೀಜ
ಎಲ್ಲೆಂದರಲ್ಲಿ ಹುಟ್ಟಿಕೊಳ್ಳುತ್ತ
ಯಾರ ನೀರು ಗೊಬ್ಬರದ ಆರೈಕೆಗೂ ಕೈಕಾಯದೆಯೆ
ನೆಲದ ಕರುಳಿಂದ ತನ್ನ ಕೂಳನ್ನು ತಾ ಬಗೆದು ತಿನ್ನುತ್ತ
ಬೀದಿಯ ಬಡ ಹೈಕಳಂತೆ ಹುಚ್ಚಾಗಿ ಬೆಳೆಯುವುದು,
ಬೆಳೆದಲ್ಲೆಲ್ಲ ಕಾಡಾಗುವುದು.

೨

ಮನೆಯ ತೋಟಕ್ಕಂತೂ ಅದು ಹೇಳಿ ಮಾಡಿದ್ದಲ್ಲ.
ತೆಂಗು ಅಡಕೆಗಳಂತೆ ಬೆಳೆಯದು ಆಕಾಶಕ್ಕೆ ನೇರ.
ಕಾಂಬ ಕಣ್ಣಿಗೆ, ತೆಗೆವ ಚಿತ್ರಕ್ಕೆ ಸುಂದರವೊ? ಅಲ್ಲ.
ಅದರ ಮಾಟನೋಟಗಳ ನೋಡಿ, ಅದೆಷ್ಟು ಘೋರ –
ಅಂಕುಡೊಂಕಿನ ಕಾಂಡ, ಒರಟೊರಟಾದ ಆನೆಚಕ್ಕಳ ಮೈ
ಎತ್ತೆಂದರತ್ತ ಚಾಚಿದ ರೆಂಬೆಕೊಂಬೆಗಳು.
ಹಗಲ ಬಿಸಿಲಲ್ಲಿ ದಾರಿ ನಡೆವವರು ಸಹ ಕತ್ತೆತ್ತಿ ನೋಡಿ
ಅದರ ದಟ್ಟ ನೆರಳಿನ ದಯಕೆ ವಂದಿಸುವುದಿಲ್ಲ.

೧೯೯೫ರ ಯುಗಾದಿಯಂದು ರಾಯಚೂರಿನ ತರುಣ ಕವಿ ಹಾಗೂ ಛಾಯಾಚಿತ್ರಕಾರ ಎಸ್. ಜಿ. ಸ್ವಾಮಿ ಶುಭಾಶಯಪೂರ್ವಕವಾಗಿ ಕಳಿಸಿದ ಹೂತುಂಬಿದ ಬೇವಿನ ಮರದ ವರ್ಣಚಿತ್ರದಿಂದ ಪ್ರೇರಣೆ ಪಡೆದು ಬರೆದದ್ದು.

೩

ರಾತ್ರಿಯಲಿ ಅದ ನೋಡುವುದು ಭಯದ ಮಾತೇ ಸರಿ.
'ಈ ಭೂತ
ಭೂತಪ್ರೇತಗಳಿಗಾವಾಸ'
ಎಂದು ಮಕ್ಕಳಿಗೆ ಉಚ್ಚೆ ಹುಯಿಸುವುದಂತು ಸಾಮಾನ್ಯ.
ಮಳೆಗಾಲದಲ್ಲೋ, ಕೇಳಲೆಬೇಡಿ
ಕಂಡಕಂಡಲೆಲ್ಲ ಕಡುಹಳದಿ ಹಣ್ಣು
ಕೊಳೆಯುತ್ತ ನಾರುತ್ತ ದುರ್ನಾತ ಬೀರುತ್ತ
ದಾರಿಹೋಕರ ತಲೆ ಸಿಡಿಸುವುದು.

೪

ಅದರ ಉಪಯೋಗವೇನಿದ್ದರೂ
ನಾಟಿ ವೈದ್ಯರ ಗುಳಿಗೆ ಮಾತ್ರೆಗಳ ಮಾತು ಹಾಗಿರಲಿ,
ನಮ್ಮ ಪಾಲಿಗೆ ಸೊಪ್ಪಿನದಷ್ಟೆ.
ಅದೂ ಮಾರಿಪೂಜೆಗೆ, ದೆವ್ವ ಬಿಡಿಸುವುದಕ್ಕೆ,
ಬಾಣಂತಿ ಸ್ನಾನಕ್ಕೆ,
ಮಕ್ಕಳಿಗೆ 'ಅಮ್ಮ' ಬಂದಾಗ
ಅರಿಸಿನದ ಜತೆ ಅರೆದು, ಮೈಗೆಲ್ಲ ತಿಕ್ಕಿ
ನೀರೆರೆಯುವುದಕ್ಕೆ.

೫

ಆದರೂ ಚೈತ್ರದ ಈ ಮೊದಲ ದಿನ
ಯಾವ ಮೋಹಿನಿಯೊ ಏನೊ
ಮೈ ಮೆಟ್ಟಿಬಂದಂತೆ
ತನ್ನೆಲ್ಲ ಹೊಲಸರೂಪನ್ನು ಮುಚ್ಚಿಸಲೆಂದು
ಮೈತುಂಬ ಎಳಹಸಿರ ಕುಡಿ ಹೊರಟಿಸುತ
ಮೊಗ್ಗಾಗಿ ಅರಳಿ, ಹೂವಾಗಿ ಬಿರಿದು

ಸುತ್ತ ಹತ್ತುಕಡೆ ಸಿರಿಗಂಧ ಸೂಸುತ್ತ
ಗಾಳಿತಾಳಕ್ಕೆ ಕುಣಿಯುತಿದೆ ಬೇವು.

೬

ಈ ಒಂದು ದಿನ
ಇದರ ಹೂ ಚಿಗುರೆಲ್ಲ ವಿಚಿತ್ರ ಸಿಹಿ.
ಮನೆಮನೆಯ ಪೋರಪೋರಿಯರೆಲ್ಲ
ಹೂ ಚಿಗುರ ತರಿದು
ಅದರ ಹುಚ್ಚು ಸಿಹಿ ತಾಳದ್ದಕ್ಕೆ ಬೆಲ್ಲವ ಬೆರಸಿ ಹದಮಾಡಿ
ಬೆಳ್ಳಿ ಬಟ್ಟಲಲ್ಲಿಟ್ಟು
'ಬದುಕೆಂದರಿದೊ ಹೀಗೆ' ಎನ್ನುತ್ತ
ಕೊಟ್ಟು ಕೊಳ್ಳುತ್ತ ಮೆಲ್ಲುವರು.

೭

ಬೇವಿನ ಸಿಹಿ– ಬೆಲ್ಲದ ಕಹಿ!
ಎರಡೂ ಬೆರೆತಾಗ ಓ, ಅದೆಷ್ಟು ರುಚಿ!
ಈ ಚಮತ್ಕಾರ
ಬೇವಿನದೆ?
ಚೈತ್ರದ್ದೆ?
ಅಥವಾ ಕಹಿಯಲ್ಲು ಸಿಹಿ ಹುಡುಕಿ
ಬದುಕ ದುರ್ಭರತೆಯನು ಹಗುರಾಗಿಸುವ
ಜನಮಾನಸದ ರಕ್ಷಾತಂತ್ರ ಇದಿದ್ದರೂ ಇರಬಹುದೆ?

೧೯೯೫

ವಿಭಾಷಿತಗಳು

೧. ವಸಂತ ಧ್ವನಿ

ಕಾಕಃ ಕೃಷ್ಣಃ ಪಿಕಃ ಕೃಷ್ಣಃ
ನಾಸ್ತಿಭೇದೊ ದ್ವಯೋರಪಿ
ವಸಂತೇ ಸಮುಪಾಯಾತೆ
ಕಾಕಃ ಕಾಕಃ ಪಿಕಃ ಪಿಕಃ

- ನೀತಿ ತರಂಗ

೧

ಶಿಶಿರ.
ಎಲೆಯೆಲ್ಲ ಉದುರಿ, ಉಳಿದ ಒಣ ಅಸ್ತಿಪಂಜರ
ಮರ.
ಬೋಳುಕೊಂಬೆಯ ಮೇಲೆ ಚಳಿಗೆ ದನಿಗಟ್ಟಿ ಕುಳಿತೊಂದು
ಹಕ್ಕಿಮರಿ.
ಕಪ್ಪೋ ಕಪ್ಪು,
ಕೋಲ್ಟಾರಿನಲಿ ಕಲ್ಲಿದ್ದಲನು ದ್ರವಿಸಿ ಎರಕ ಹೊಯ್ದಂತೆ.
ಯಾವದಿದು ಈ ಹಕ್ಕಿ?
ಕಾಗೆಯೇ? ಕೋಗಿಲೆಯೆ?
ತಾಳಿ, ಒಂದೊಂದಕ್ಕೂ ಅದರ ಒರೆಯುಂಟು.
ಒರೆ ಹಿಡಿವ ಕಾಲವೂ ಉಂಟು.
ಹೊತ್ತು ಗೊತ್ತು ಮಾಡುವುದು

ವಿಭಾಷಿತಗಳು : ಕೆಲವು ಸಂಸ್ಕೃತ ಸುಭಾಷಿತ, ಶ್ಲೋಕ ಇತ್ಯಾದಿಗಳ ವಿಸ್ತೃತರೂಪ.

ಬಣ್ಣರೂಪಗಳಾಚೆಗಿನ ಧ್ವನಿಮೌಲ್ಯವನ್ನು,
ಜೀವದಾಳದ ಜೀವಾಳವನ್ನು.

೨

ವಸಂತ.
ಬಂದೇ ಬಂತು ಶಿಶಿರದ ಬೆನ್ನಟ್ಟಿ.
ಮಾಮರವೀಗ ಮೈತುಂಬ ಚಿಗುರಿ
ದೇವರಾಟಕ್ಕೆ ಮಾಡಿದ ಹಸಿರು ಬುಗುರಿ.
ರೆಂಬೆಕೊಂಬೆಗಳ ಅಂಚಿನಲ್ಲೆಲ್ಲ ಹೊಂಚುವುದೀಗ
ಕಂಚುಬಣ್ಣದ ಚೊಂಚುಮೊಗ್ಗು.
ಮೊಗ್ಗೊಡೆದು ಅರಳಿ ಹತ್ತೂಕಡೆಗೆ ಗಂಧ ಸೂಸುವುದರ
ಬಂಗಾರ ಕಳಶ.
ಆಗ ಮರದಾಳದಿಂದೇಳುವುದು
ಹಕ್ಕಿ ಸಿಳ್ಳು –
'ಕಾ' 'ಕಾ' ಅನ್ನುತ್ತ ಕಿವಿಯಿರಿವ ಕರ್ಕಶ ಕಾಕತಾನ
ಇಲ್ಲವೇ ಷಡ್ಜದೀಚೆಯಿಂದೆದ್ದು ಥಟ್ಟನೆ ಪಂಚಮಕ್ಕೇರಿ ನಿಲ್ಲುವ
ಆರ್ಧ, ಮೇಲೊಂದು ದೀರ್ಘಸ್ವರಗಳ ಮೋಹಬಂಧ – 'ಕುಕೂ', 'ಕುಕೂ'.
ತಿಳಿಯಿತಲ್ಲಾ, ಹಕ್ಕಿ ಕಾಗೆಯೋ ಕೋಗಿಲೆಯೊ!

೧೯೯೫

೨. ಅಕರಾಳ-ವಿಕರಾಳಗಳು

ಅಜಾಗಲಸ್ತ ಸ್ತನ ಉಷ್ಟ್ರ ಪೃಷ್ಠಂ
ನಾಸಾಂತರೇ ರೋಮ ಅಥ ಅಂಡಯುಗ್ಮಂ।
ವೃಥಾ ಸೃಜನ ಸಾಯಣ ಮಾಯಣೋಚ
ಪೂಜಾಂ ನ ಲೇಭೇ ಭುವಿ ಪದ್ಮಸಂಭ ॥
- ಕಾಳಿದಾಸ

ಬ್ರಹ್ಮಸೃಷ್ಟಿಯಲಿ
ನಮಗಿಷ್ಟವಾಗುವ
ಹೂ-ಹಣ್ಣು, ಚಂದ್ರ ತಾರೆಯರಷ್ಟೇ ಅಲ್ಲ,
ಹಾಡುಹಗಲೇ ದಿಗಿಲು ಹುಟ್ಟಿಸುವ
ಅಕರಾಳ ವಿಕರಾಳಗಳು ಸಹ
ನೂರಾರು :
ಆಡ ಗಂಟಲಿನಂತೆ ಜೋತುಬಿದ್ದ ಮೊಲೆ.
ಯಾವ ಪುರುಷಾರ್ಥಕ್ಕೆಂದು ತಿಳಿಯದ
ಒಂಟೆಯ ಡುಬ್ಬ.
ಕೂದಲ ಕಾಡೋ ಎಂಬಂಥ
ಪೊಟರೆ ಮೂಗು.
ಗಂಟೆನಾಲಗೆಯಂತ ಅತ್ತಿತ್ತ ಜೋತಾಡುವ
ಮುದಿತರಡು.
ಕಂತೆ ಕಂತೆ ನಿರರ್ಥಕ ಬರೆಹಗಳ
ಈ ಸಾಯಣ್ಣ, ಮಾಯಣ್ಣಗಳು.

೧೯೯೫

೩. ಗಿರಿಜೆಗೆ

> ತಪಸ್ವೀ ಕಾಂ ಗತೋವಸ್ಥಾಂ ಇತಿ ಸ್ಮೇರಾನನ ಇವ ।
> ಗಿರಿಜಾಯಾಂ ಸ್ತನೋ ವಂದೇ ಭವಭೂತಿ ಸಿತಾನನ ॥
>
> - **ಭವಭೂತಿ**

ಏನೆ ಇದು, ಗಿರಿಜೆ
ನಿನ್ನ ಈ ಅವತಾರ ?
ಬರಿಯ ಮೂತಿಯೆ ಅಲ್ಲ
ಮೊಲೆಯ ನಗೆಮೊಗದ ಮೇಲೆಲ್ಲ ಬಳಿದಿದೆ ಬೂದಿ –
ಹಟ್ಟಿಗೋಡೆಗೆ ಸುಣ್ಣ ಬಳಿದಂತೆ.

ತಪ ಮುಗಿದ ಖುಷಿಗೆ
ನಡುರಾತ್ರಿ ಒಬ್ಬಳೇ ಹೋಗಿ
ಸ್ಮಶಾನದಲ್ಲಿ ಆ ಬೂದಿಬಡಕ ಶಿವನನ್ನು
ರಮಿಸಿ ಬಂದಿರುವಳಲ್ಲ
ಲಜ್ಜೆಗೆಟ್ಟೇ ತುಡುಗಿ –
        ಇದೊ, ಅವಳ ಬೂದಿಮೊಲೆಗೆ
        ಭವಭೂತಿಯ ನಮಸ್ಕಾರ.

೧೯೯೫

೪. ಸುಪ್ರಸಿದ್ಧ ಮಂದಿ

ಘಟಂ ಛಿಂದ್ಯಾತ್ ಪಟಂ ಛಿಂದ್ಯಾತ್ ಕುರ್ಯಾತ್ ರಾಸಭರೋಹಣಂ।
ಏನಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ ಭವೇತ್ ॥

- ಶಾರ್ಙ್ಗಧರ ಪದ್ಧತಿ

ಒಬ್ಬ –
ನಡುದಾರಿಯಲಿ ನಿಂತು
ಹೊತ್ತ ಮಡಕೆಯನೊಡೆದ.

ಇನ್ನೊಬ್ಬ –
ಮಂದಿ ನೋಡನೋಡುತ್ತಿದ್ದಂತೆಯೇ
ತೊಟ್ಟ ಅಂಗಿಯ ಹರಿದ.

ಮತ್ತೊಬ್ಬ –
ಅವರಿಬ್ಬರನ್ನೂ ಮೀರಿಸಹೊರಟು
ಕತ್ತೆ ಬೆನ್ನನ್ನೇರಿ
ಊರ ಬೀದಿಯಲಿ ಮೆರೆದ.

ಅಂತೂ –
ಒಬ್ಬೊಬ್ಬನೂ
ಆದ
ಹೇಗೋ ಸುಪ್ರಸಿದ್ಧ.

೧೯೬೦

೫೫. ಪರಸ್ಪರ

ಉಷ್ಟ್ರಾಣಾಂ ಚ ವಿವಾಹೇಷು ಗೀತಂ ಗಾಯಂತಿ ಗಾರ್ದಭಾಃ ।
ಪರಸ್ಪರಂ ಪ್ರಶಂಸಂತಿ ಅಹೋರೂಪಂ ಅಹೋ ಧ್ವನಿಃ ॥
- ಹಿತೋಪದೇಶ

ಒಂಟೆಯ ಮದುವೆ,
ಕತ್ತೆಯ ಗಾಯನ.

ಹೊಗಳಿಟ್ಟಿದ್ದವು
ಒಂದಿನ್ನೊಂದನ !

ಒಹೊ, ನೀ ರೂಪದ ಖನಿ !
ಅಹ, ನಿಂದದ್ಭುತ ದನಿ !!

೧೯೬೦

ಕೆಲವು ಹಳೆಯ ಹಾಸ್ಯದ ಕುಟುಕುಗಳು

೧. ಮುಂಗುರುಳು

ಗುಂಗುರಿನ ಮುಂಗುರುಳು
ಇವಳ ಮುಖಕತಿ ಸೊಗಸು.
ಕಾಳಿದಾಸನ ಕೇಳು
ವಿಷಯ ಕಾವ್ಯಕೆ ಲೇಸು.

ಬೆಳಗಾಗ ಕಾಫಿಯಲಿ
ತೇಲಿ ಬರೆ ಅದೆ ಕುರುಳು
ಹೇಳಬೇಕೆ ಬೇರೆ ?
ಆಯ್ತು ಗಂಟಲಿಗುರುಳು !

೨. ರಕ್ತದಾನ

ಯುದ್ಧ ಕಾಲದಲೊಬ್ಬ ಮೈಸೂರ ದೇಶಭಕ್ತ
ಇದ್ದಕ್ಕಿದ್ದಂತಾಗಿ ತೀವ್ರ ಸೇವಾಸಕ್ತ.
ಹೋದ ಡಾಕ್ಟರ ಬಳಿಗೆ.
ತೋಳಿಗಿಟ್ಟರೆ ನಳಿಗೆ
ಹರಿದಿತ್ತು ಬಿಸಿ ಬಿಸಿ ಕಾಫಿ! ಇತ್ತಲ್ಲಲ್ಲಿ ರಕ್ತ ?

೩. ಪುರುಷ ಪರೀಕ್ಷೆ

ಶಾಂತಿ ಕಾಲದಿ ಭಟ್ಟ 'ಎನ್ಸಿಸೀ'ಲಿ ಕರ್ನಲ್ಲು.
ಎದ್ದಾಗ ಯುದ್ಧದ ಗುಲ್ಲು
'ಸತ್ತೆನೋ ಕೆಟ್ಟೆನೊ' ಎಂದು ಊರಿಗೆ ಬಂದ ಓಡಿ.
'ಅಯ್ಯೊ, ಹೆಣ್ಣಿಗ' ಎಂದು ಮೂತಿ ತಿವಿದರು ಮಂದಿ.
ಗಂಡುತನ ತೋರಿಸಲು ಹೆಣ್ಣೊಂದ ಹಿಡಿದು
ಹುಟ್ಟಿಸಿಯೆ ಬಿಟ್ಟ ಭಟ್ಟ, ಅವಳಿ-ಜವಳಿ!

೪. ಕವಿಯೋಧನಿಗೆ

ನಿನ್ನ ನಾಲಿಗೆಯಲಗು ಕತ್ತಿಗಿಂತಲು ಚುರುಕು.
ಗುಂಡಿಗೆಲ್ಲಿದೆಯಯ್ಯ ನಿನ್ನ ಯಮಕದ ಚಮಕು ?
ಚತುರ ಮಾತಿನ ಮಗ್ಗ
ನೀನೆಷ್ಟೆ ನೆಯ್ ಕಗ್ಗ
ವೈರಿಯನ್ನುರುಳಿಸಲು ಬೇಕಯ್ಯ ಬಂದೂಕು!

೫. ಅವರವರ ಗೋಳು

''ಮೊದಲ ಹಾಲ್ಗುಟುಕಿನಲೆ ನಿನ್ನ ಬದುಕಿಗೆ ಬಂದು
ನೀನುಂಡ ಎಂಜಲನೆ ನಾನು ಸಹ ಮೆದ್ದು
ಸತ್ತಾಗ 'ಸತಿ' ಯಾಗಿ ನಿನ್ನೊಡನೆ ಸುಟ್ಟೆ.
ಆದರೂ ನೀ ಮೆಚ್ಚಿದ್ದು ಅವಳನ್ನ ಬರಿದೆ''
— ಎಂದಿಟ್ಟಿತ್ತು ಗೋಳ
ಹೊಟ್ಟೆಯೊಳಗಿನ ಹುಳ!

೧೯೬೨


TEA STALL
BATA
DAGDISH '98